ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

ಮಾಸಪತ್ರಿಕೆ

# JSS VARTHAPATHRA

Monthly Magazine

ಸಂಪುಟ 11 ಸಂಚಿಕೆ 5 ಮೇ 2026




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ 2023, 2024 ಮತ್ತು 2025ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿ ಹಾಗೂ ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಗಳನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರದಾನ ಮಾಡಲಾಯಿತು. ಶ್ರೀ ಕಿಶೋರ್‌ಕುಮಾರ್ ಹಿರೇಮಠ, ಶ್ರೀ ವಿಜಯ ರಾವ್, ಪ್ರೊ. ಕೆ.ಎಸ್. ಅಪ್ಪಾಜಯ್ಯ, ಶ್ರೀಮತಿ ಪುಷ್ಪಾ ಬಿ. ಜಯಶೆಟ್ಟಿ, ಶ್ರೀ ಎಚ್.ಎಸ್. ಸಿದ್ಧಗಂಗಪ್ಪ, ಡಾ. ಓ.ಎಲ್. ನಾಗಭೂಷಣಸ್ವಾಮಿ, ಶ್ರೀ ಅನೂಪ್ ಬ್ಯಾಲಹುಣಸಿ, ಶ್ರೀ ಸಂಗಪ್ಪ ನಿಂಗಪ್ಪ ಮಲಗೊಂಡ, ಶ್ರೀ ಶಿವಪುತ್ರಪ್ಪ ಎಂ. ಬಡಿಗೇರ ಮತ್ತು ಶ್ರೀ ಚಂದ್ರಶೇಖರ ಭೀಮಣಪ್ಪ ಸೋಮಶೆಟ್ಟಿ, ಶ್ರೀಮತಿ ಪಾರ್ವತಿ ಹಾಲಭಾವಿ, ಶ್ರೀ ಸುರೇಶ್ ಹಾಲಭಾವಿ, ಶ್ರೀ ಸುದರ್ಶನ್, ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ, ಶ್ರೀ ಶಿರೀಷ್ ಜಯಶೆಟ್ಟಿ, ಡಾ. ಚಿತ್ಕಲಾ ಪಾಟೀಲ್, ಡಾ. ಬಿ.ಎಸ್. ಮಂಜುನಾಥಸ್ವಾಮಿ, ಡಾ. ಎಂ.ಎಸ್. ಮೂರ್ತಿ, ಡಾ. ಶ್ವೇತಾ ಮಡಪ್ಪಾಡಿ, ಶ್ರೀ ಆರ್. ರತಾಂಗ್ ಚಂದ್ರ, ಶ್ರೀಮತಿ ಸುಶೀಲ ಸತೀಶ್, ಶ್ರೀ ಸತೀಶ್ ಪ್ರಫುಲ್ಲಚಂದ್ರ, ಶ್ರೀ ಬಸವಕುಮಾರ್ ಸೋಮಶೆಟ್ಟಿ, ಶ್ರೀಮತಿ ವೀಣಾ ಬಸವಕುಮಾರ್‌ವರುಗಳಿದ್ದಾರೆ. (15 ಏಪ್ರಿಲ್ 2026)




ಮೈಸೂರಿನ ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನಲ್ಲಿ 29ನೇ ತಂಡದ ಬಿಎಸ್‌ಸಿ ನರ್ಸಿಂಗ್ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸಮರ್ಪಣಾ ಸಮಾರಂಭವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್‌ರವರು ದೀಪ ಬೆಳಗುವ ಮೂಲಕ ಉದ್ಘಾಟಿಸುತ್ತಿರುವುದು. ಪ್ರಾಂಶುಪಾಲರಾದ ಪ್ರೊ. ಎಂ.ಕೆ. ಅಶ್ವತಿ ದೇವಿ ಮತ್ತು ಜೆಎಸ್‌ಎಸ್ ಆಸ್ಪತ್ರೆಯ ಶುಶ್ರೂಷಕ ಸೇವೆಗಳ ಮುಖ್ಯಸ್ಥರಾದ ಶ್ರೀಮತಿ ಜಾನೆಟ್ ಮಥಾಯಿಸ್‌ರವರುಗಳಿದ್ದಾರೆ. (24.4.2026)




ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ವತಿಯಿಂದ ನ್ಯಾಮ್ ಎಸ್&ಟಿ ಸೆಂಟರ್ ಮತ್ತು ಭಾರತೀಯ ಔಷಧ ವಿಜ್ಞಾನ ಕಾಲೇಜುಗಳ ಸಂಘದ ಸಹಯೋಗದೊಂದಿಗೆ ಆಯೋಜಿಸಿದ್ದ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಡಾ. ಬಾಬಿ ಜಾರ್ಜ್‌ರವರು ಉದ್ಘಾಟಿಸುತ್ತಿರುವುದು. ಡಾ. ಟಿ.ಎಂ. ಪ್ರಮೋದ್‌ಕುಮಾರ್, ಡಾ. ವಿಶಾಲ್ ಕುಮಾರ್ ಗುಪ್ತ, ಡಾ. ಎಚ್. ಬಸವನಗೌಡಪ್ಪ, ಡಾ. ಅಮಿತವ್ ಬಂಡೋಪಾಧ್ಯಾಯ, ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಟಿ.ವಿ. ನಾರಾಯಣ, ಡಾ. ಎಂ.ಡಿ. ಕರ್ವೇಕರ್, ಡಾ. ಜಯಪಾಲ್ ರೆಡ್ಡಿ ಮತ್ತು ಡಾ. ಎಸ್.ಬಿ. ಧನಪಾಲ್‌ರವರುಗಳಿದ್ದಾರೆ. (23.4.2026)

# ಕಲೆ ಮತ್ತು ಸಾಹಿತ್ಯ ಮನಸ್ಸಿಗೆ ಸಾಂತ್ವನ ನೀಡುವ ಅದ್ಭುತ ಶಕ್ತಿಗಳು




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ನಡೆದ 2023, 2024 ಮತ್ತು 2025ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ವಚನ ಚಿತ್ರರಚನಾ ಪಿತಾಮಹ ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿ ಹಾಗೂ ಕಲಾಗುರು ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಗಳ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಪರಮಪೂಜ್ಯ ಜಗದ್ಗುರುಗಳು ಆಶೀರ್ವಚನ ನೀಡಿದರು. (15 ಏಪ್ರಿಲ್ 2026)

ಕಲೆ ಮತ್ತು ಸಾಹಿತ್ಯ ಮನುಷ್ಯನ ಮನಸ್ಸಿಗೆ ಸಾಂತ್ವನ ನೀಡುವ ಅದ್ಭುತ ಶಕ್ತಿಗಳು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 15.4.2026ರಂದು ನಡೆದ 2023, 2024 ಮತ್ತು 2025ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ವಚನ ಚಿತ್ರರಚನಾ ಪಿತಾಮಹ ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿ ಹಾಗೂ ಕಲಾಗುರು ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಗಳ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಲಾವಿದ ರಚಿಸುವ ಚಿತ್ರಗಳಿಗೆ ಮನುಷ್ಯನನ್ನೇ ಮರೆಸುವಂಥ ಶಕ್ತಿಯಿರುತ್ತದೆ. ಕಲೆ, ಸಾಹಿತ್ಯ, ಸಂಗೀತ ಮತ್ತು ನೃತ್ಯಗಳಲ್ಲಿ ಸಂಪೂರ್ಣವಾಗಿ ತಲ್ಲೀನವಾದರೆ ಅವುಗಳು ಅದ್ಭುತವಾಗಿ ಮೂಡಿಬರುತ್ತವೆ. ಅವು ನೋಡುಗರು ಮತ್ತು ಓದುಗರ ಮನಸ್ಸುಗಳಿಗೂ ಮುದ ನೀಡುತ್ತವೆ. ಸಾಹಿತ್ಯ ಮತ್ತು ಕಲಾ ಕ್ಷೇತ್ರದಲ್ಲಿ ಅಂತಹ ಪ್ರಾವೀಣ್ಯತೆಯನ್ನು ಹೊಂದಿರುವವರನ್ನು ಗುರುತಿಸಿ ಇಲ್ಲಿ ಗೌರವಿಸಲಾಗಿದೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಡಾ. ಬಿ.ಎಸ್. ಮಂಜುನಾಥಸ್ವಾಮಿಯವರು ಹಿಂದೆ ರಾಜ–ಮಹಾರಾಜರುಗಳ ಕಾಲದಲ್ಲಿ ಕಲೆ, ಸಂಸ್ಕೃತಿಯನ್ನು ಗೌರವಿಸಲಾಗುತ್ತಿತ್ತು. ಅಂತಹ ಅದ್ಭುತವಾದ ಕಾರ್ಯವನ್ನು ಶ್ರೀಮಠ ಮಾಡಿಕೊಂಡು ಬರುತ್ತಿದೆ. ನಿಜವಾದ ಕಲಾವಿದರ ಕಾರ್ಯಗಳನ್ನು ಗುರುತಿಸಿ ಇಲ್ಲಿ ಸನ್ಮಾನಿಸಿ ಪ್ರೋತ್ಸಾಹಿಸಲಾಗಿದೆ. ಇಂದು ಪುಸ್ತಕ ಸಂಸ್ಕೃತಿ ಹೆಚ್ಚುತ್ತಿದೆ. ಬರೆಯುವವರು ಹೆಚ್ಚಾಗಿದ್ದಾರೆ. ಆದರೆ ಓದುವವರ ಸಂಖ್ಯೆಯಲ್ಲಿ ಕೊರತೆಯಿದೆ. ಒರೆಗೆ ಹಚ್ಚಿ ವಿಮರ್ಶೆ ಮಾಡುವವರು ಹೆಚ್ಚಬೇಕಿದೆ. ಸಂಸ್ಕೃತಿಯ ಬೆಳವಣಿಗೆಯಲ್ಲಿ ಕಲೆ ಮತ್ತು ಸಾಹಿತ್ಯದ ಪಾತ್ರ ಅಪಾರವಾದುದು. ಪೂಜ್ಯರು

ಇಂತಹ ಅತ್ಯುತ್ತಮವಾದ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ನಮಗೆಲ್ಲ ಮಾರ್ಗದರ್ಶಕರಾಗಿದ್ದಾರೆ ಎಂದರು.

ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿಯವರು ಕಲೆ ಜನರ ಬದುಕಿನ ಭಾಗವಾಗಿದೆ. ದೃಶ್ಯಕಲೆಯಲ್ಲಿ ವ್ಯಕ್ತಿ, ಮೌಲ್ಯ ಮತ್ತು ಚಿಂತನೆಗಳು ಬಹಳ ಮುಖ್ಯವಾದವು. ಶ್ರೀಮಠ ಅಕ್ಷರ ಸಂಸ್ಕೃತಿಯ ಜೊತೆಗೆ ಅನಕ್ಷರತಾ ಪ್ರಜ್ಞೆಯನ್ನು ಗುರುತಿಸಿ ಗೌರವಿಸುತ್ತಿದೆ. ಇಂದು ಸನ್ಮಾನಿಸಿರುವ ಕಲಾವಿದರೆಲ್ಲರೂ ಪರಂಪರೆಯ ವಕ್ತಾರರಾಗಿ ನಿಲ್ಲುವಂಥವರು ಎಂದು ಹೇಳಿದರು.

ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಯನ್ನು ಡಾ. ಓ.ಎಲ್. ನಾಗಭೂಷಣಸ್ವಾಮಿ, ಶ್ರೀ ಎಚ್.ಎಸ್. ಸಿದ್ಧಗಂಗಪ್ಪ, ಡಾ. ಎಸ್. ಶಿವಾನಂದ ಬ್ಯಾಲಹುಣಸಿ, ಡಾ. ಅಜಯಕುಮಾರ್ ತಾಂಡೂರ ಹಾಗೂ ದಿ. ಪ್ರೊ. ಭಾಲಚಂದ್ರ ಜಯಶೆಟ್ಟಿ ಅವರ ಪರವಾಗಿ ಅವರ ಕುಟುಂಬದವರಿಗೆ, ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿಯನ್ನು ಶ್ರೀ ಸಂಗಪ್ಪ ನಿಂಗಪ್ಪ ಮಲಗೊಂಡ, ಶ್ರೀ ಶಿವಪುತ್ರಪ್ಪ ಎಂ. ಬಡಿಗೇರ ಮತ್ತು ಶ್ರೀ ಚಂದ್ರಶೇಖರ ಭೀಮಣಪ್ಪ ಸೋಮಶೆಟ್ಟಿಯವರುಗಳಿಗೆ ಹಾಗೂ ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಯನ್ನು ಪ್ರೊ. ಕೆ.ಎಸ್. ಅಪ್ಪಾಜಯ್ಯ, ಶ್ರೀ ವಿಜಯ ರಾವ್ ಹಾಗೂ ಶ್ರೀ ಕಿಶೋರ್‌ಕುಮಾರ್ ಹಿರೇಮಠರವರುಗಳಿಗೆ ಪ್ರದಾನ ಮಾಡಲಾಯಿತು.

ಶ್ರೀ ಸತೀಶ್ ಪ್ರಫುಲ್ಲಚಂದ್ರ, ಶ್ರೀ ಸುರೇಶ್ ಡಿ. ಹಾಲಭಾವಿ, ಶ್ರೀಮತಿ ಪಾರ್ವತಿ ಹಾಲಭಾವಿ, ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ ಹಾಗೂ ಶ್ರೀ ಸುದರ್ಶನ್‌ರವರುಗಳು ಉಪಸ್ಥಿತರಿದ್ದರು. ಧ್ವನಿ ಫೌಂಡೇಷನ್ನಿನ ಅಧ್ಯಕ್ಷರಾದ ಡಾ. ಶ್ವೇತಾ ಮಡಪ್ಪಾಡಿಯವರು ಕೃತಿಗಳ ಪರಿಚಯವನ್ನು ಮಾಡಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಶ್ರೀ ರೂಪ ಗುರುಪ್ರಸಾದ್ ಹಾಗೂ ಶ್ರೀ ಕೆ.ಜಿ. ವಿನುತಾ ಪ್ರಾರ್ಥಿಸಿದರು. ಶ್ರೀ ನಗರ್ಲೆ ಶಿವಕುಮಾರ, ಕು. ಎಚ್.ಎಸ್. ಅಂಬಿಕಾ ಶಿವನಂಜಪ್ಪ, ಶ್ರೀ ಎನ್.ಪಿ. ಪರಶಿವಮೂರ್ತಿ, ಡಾ. ಹೆಚ್.ಆರ್. ಮಮತಾ, ಶ್ರೀ ಜಿ.ಎಂ. ಪ್ರಸಾದ್, ಶ್ರೀಮತಿ ನಾಗಲಾಂಬಿಕಾ ನಾಗಲಿಂಗಸ್ವಾಮಿ, ಶ್ರೀ ಕುಮಾರಸ್ವಾಮಿ ವಿರಕ್ತಮಠ, ಶ್ರೀಮತಿ ಸೌಮ್ಯ, ಶ್ರೀ ಎಸ್.ಸಿ. ಚನ್ನಬಸಪ್ಪ, ಶ್ರೀಮತಿ ಡಿ.ಎಸ್. ಅಂಬಿಕಾ ಮತ್ತು ಶ್ರೀಮತಿ ಎಂ. ದೇವಿಕಾರವರುಗಳು ಪ್ರಶಸ್ತಿ ಪುರಸ್ಕೃತರ ಸ್ವಸ್ತಿ ವಾಚನ ಮಾಡಿದರು. ಡಾ. ರೇಚಣ್ಣ ವಂದಿಸಿದರು. ಶ್ರೀ ಬಿ. ನಿರಂಜಮೂರ್ತಿ ಕಾರ್ಯಕ್ರಮ ನಿರೂಪಿಸಿದರು.



# ಆತ್ಮವಿಶ್ವಾಸವಿದ್ದರೆ ಏನನ್ನಾದರೂ ಸಾಧಿಸಬಹುದು



ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಪದವೀಧರರ ದಿನಾಚರಣೆಯಲ್ಲಿ ಡಾ. ಎಂ.ಎನ್. ಸುಮಾ, ಡಾ. ಡಿ. ನಾರಾಯಣಪ್ಪ, ಡಾ. ಬಿ. ಮಂಜುನಾಥ್, ಡಾ. ಹೆಚ್. ಬಸವನಗೌಡಪ್ಪ, ಡಾ. ಎಂ.ಕೆ. ರಮೇಶ್, ಡಾ. ಸಿ.ಜಿ. ಬೆಟಸೂರಮಠ, ಡಾ. ಎನ್. ಸುಧೀಂದ್ರ ಭಟ್, ಡಾ. ಸಿ.ಪಿ. ಮಧು, ಡಾ. ಪ್ರಶಾಂತ್ ವಿಶ್ವನಾಥ್ ಹಾಗೂ ಡಾ. ಮಾಂತಪ್ಪನವರುಗಳಿದ್ದಾರೆ. (4 ಏಪ್ರಿಲ್ 2026)

ವೈದ್ಯಕೀಯ ಪದವಿ ಮುಗಿಸಿರುವ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವಿದ್ದರೆ ಏನನ್ನಾದರೂ ಸಾಧಿಸಬಹುದು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗದ ಮೆಡಿಕಲ್ ಅಸೆಸ್ಮೆಂಟ್ ಮತ್ತು ರೇಟಿಂಗ್ ಬೋರ್ಡ್ ಅಧ್ಯಕ್ಷರಾದ ಡಾ. ಎಂ.ಕೆ. ರಮೇಶ್‌ರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲಿ ದಿನಾಂಕ 4.4.2026 ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಪದವೀಧರರ ದಿನಾಚರಣೆಯಲ್ಲಿ ಮಾತನಾಡಿದ ಅವರು, ವೈದ್ಯಕೀಯ ಸೇವೆಯಲ್ಲಿರುವವರು ಪುಸ್ತಕಗಳನ್ನು ಓದಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಜ್ಞಾನ ಹೆಚ್ಚಾದಂತೆ ಆತ್ಮವಿಶ್ವಾಸ ವೃದ್ಧಿಯಾಗುತ್ತದೆ. ಆತ್ಮವಿಶ್ವಾಸದಿಂದ ಕೆಲಸ ಮಾಡಿದಾಗ ನಿಮ್ಮಲ್ಲಿನ ಸಾಮರ್ಥ್ಯ ಹೊರಹಾಕಲ್ಪಡುತ್ತದೆ. ವಾರ್ಡಿನಲ್ಲಿ ರೋಗಿಗಳ ಜತೆ ಹೆಚ್ಚು ಸಮಯ ಕಳೆಯಬೇಕು. ಆಗ ನಿಮ್ಮಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ಪರಿಣಿತಿ ಲಭಿಸುತ್ತದೆ. ಇದರಿಂದ ಸಮಾಜ ನಿಮ್ಮನ್ನು ಹೆಚ್ಚು ಗೌರವಿಸುವುದಲ್ಲದೇ ನಿಮ್ಮ ಮೇಲೆ ಬಹಳ ನಂಬಿಕೆ ಇಡುತ್ತದೆ. ಇಂದಿನ ದಿನಗಳಲ್ಲಿ ಯುವ ಸಮೂಹ ಹೆಚ್ಚಾಗಿ ಮೊಬೈಲ್ ಗೀಳಿಗೆ ಬಲಿಯಾಗುತ್ತಿದ್ದಾರೆ. ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ, ತಂತ್ರಜ್ಞಾನ ಸದ್ಬಳಕೆಗೆ ಮುಂದಾಗಬೇಕು. ಅದರಲ್ಲೂ ವೈದ್ಯಕೀಯ ಕ್ಷೇತ್ರದವರು ನವೀನ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಬೇಕು, ಹೊಸ ತಂತ್ರಜ್ಞಾನಗಳನ್ನು ಕಲಿಯ ಬೇಕು. ಒತ್ತಡವನ್ನು ಸಮರ್ಥವಾಗಿ ನಿಭಾಯಿಸಬೇಕು ಎಂದು ಹೇಳಿದರು.

ಸಮಾರಂಭದಲ್ಲಿ 195 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ನಾಲ್ವರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ 11 ಚಿನ್ನದ ಪದಕಗಳು ಹಾಗೂ 13 ನಗದು ಬಹುಮಾನಗಳನ್ನು ನೀಡಲಾಯಿತು.

ಡಾ. ಸಿ.ಜಿ. ಬೆಟಸೂರಮಠ ವಿಶೇಷ ಸಂಚಿಕೆ ಬಿಡುಗಡೆಗೊಳಿಸಿದರು. ಡಾ. ಹೆಚ್. ಬಸವನಗೌಡಪ್ಪ, ಡಾ. ಬಿ. ಮಂಜುನಾಥ್, ಡಾ. ಎನ್. ಸುಧೀಂದ್ರ ಭಟ್, ಡಾ. ಎಂ.ಎನ್. ಸುಮಾ, ಡಾ. ಸಿ.ಪಿ. ಮಧುರವರುಗಳು ಉಪಸ್ಥಿತರಿದ್ದರು. ಕು. ಪಾರ್ವತಿ ವೆಂಕಟೇಶ್ ಹಾಗೂ ಕು. ಭುವನಾ ಪ್ರಾರ್ಥಿಸಿದರು. ಡಾ. ಡಿ. ನಾರಾಯಣಪ್ಪ ಸ್ವಾಗತಿಸಿದರು. ಡಾ. ಮಾಂತಪ್ಪ ವಂದಿಸಿದರು. ಡಾ. ಡಿ. ಸಂಧ್ಯಾ ಹಾಗೂ ಡಾ. ಶಿವಾನಂದ್ ಮನೋಹರ್ ಕಾರ್ಯಕ್ರಮ ನಿರೂಪಿಸಿದರು.

## ಸಿದ್ಧಗಂಗಾ ಶ್ರೀಗಳ ಸೇವಾಸಕ್ತಿ ಸಮುದ್ರದಷ್ಟು ಆಳ ಆಕಾಶದಷ್ಟು ಎತ್ತರವಾಗಿತ್ತು

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ನಡೆದ 336ನೇ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ 'ಕಾಯಕಯೋಗಿ ಸಿದ್ಧಗಂಗಾ ಶಿವಕುಮಾರ ಶ್ರೀಗಳು ವಿಷಯ ಕುರಿತು ವಕೀಲರಾದ ಶ್ರೀ ಜಿ. ಜಗದೀಶ ಯಡಕೊಳರವರು ಮಾತನಾಡಿದರು. ಲಕ್ಷಾಂತರ ಮಕ್ಕಳ ಬಾಳಿಗೆ ಬೆಳಕಾಗಿದ್ದ ಸಿದ್ಧಗಂಗಾ ಶ್ರೀಗಳು ಬಡಮಕ್ಕಳ ಆಶಾಕಿರಣವಾಗಿದ್ದರು. ಪದವೀಧರರಾಗಿದ್ದ ಶ್ರೀಗಳು ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ತರಗತಿಗಳಲ್ಲಿ ಬೋಧನೆ ಮಾಡುತ್ತಿದ್ದರು. ಬೆಳಗಿನ ಪ್ರಾರ್ಥನೆಯ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಹಿತನುಡಿಗಳನ್ನಾಡುತ್ತ, ಧರ್ಮ, ಶಿಕ್ಷಣ ಸಂಸ್ಕೃತಿಯನ್ನು ಬೋಧಿಸುತ್ತಿದ್ದರು. ಕೃಷಿ ಕಾಯಕ, ಕಟ್ಟಡಗಳ ನಿರ್ಮಾಣ, ಪ್ರಸಾದ ತಯಾರಿಸುವಿಕೆ ಹೀಗೆ ಪ್ರತಿಯೊಂದರಲ್ಲಿ ಕೈ ಜೋಡಿಸಿ ನಿಜವಾದ ಕಾಯಕಜೀವಿಗಳಾಗಿದ್ದರು. ರಾಜಕಾರಣಿಗಳು, ಉದ್ಯಮಿಗಳು, ಅಧಿಕಾರಿಗಳು ಎನ್ನದೇ ಎಲ್ಲರನ್ನೂ ಸಮನಾಗಿ ಕಾಣುತ್ತಿದ್ದರು ಎಂದರು.

ಶ್ರೀಮಠವು ಆರ್ಥಿಕವಾಗಿ ಕಷ್ಟಗಳನ್ನು ಅನುಭವಿಸಿದರೂ ಧೃತಿಗೆಡದೇ ಭಗವಂತನ ಸ್ಮರಣೆಯೊಂದಿಗೆ ಮುನ್ನಡೆಸಿಕೊಂಡು ಬಂದರು. 1930ರಲ್ಲಿ ಶ್ರೀಮಠದಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ 80. ಅದನ್ನು 10,000 ಮಕ್ಕಳು ಇದ್ದು ಓದುವಂತೆ ಮಾಡಿದ ಕೀರ್ತಿ ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಗೆ ಸಲ್ಲುತ್ತದೆ. ವಿದ್ಯಾರ್ಥಿಗಳು, ಪೋಷಕರನ್ನು ಪ್ರೀತಿಯಿಂದ ಮಾತನಾಡಿಸಿ ತರಗತಿಗಳಿಗೆ ಪ್ರವೇಶಾತಿಯನ್ನು ನೀಡುತ್ತಿದ್ದರು. ಕಾಯಕವೇ ಕೈಲಾಸ ಎಂಬ ಮೂಲಮಂತ್ರದೊಂದಿಗೆ ಶ್ರೀ ಸಿದ್ಧಗಂಗಾ ಮಠದ ಆಶ್ರಯದಲ್ಲಿ 135 ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸಲು ಕಾರಣೀಭೂತರಾದರು. ತಂದೆತಾಯಿಯವರನ್ನು ನೋಡಿಕೊಳ್ಳುವುದು ಮಕ್ಕಳ ಕರ್ತವ್ಯವೆಂದು, ವೃದ್ಧಾಶ್ರಮಗಳನ್ನು ಹೆಚ್ಚಾಗಿ ಪ್ರೋತ್ಸಾಹಿಸಬಾರದಾಗಿ ಹೇಳುತ್ತಿದ್ದರು. ಶ್ರೀಗಳು ಸೌಮ್ಯವಾಗಿದ್ದರೂ ಕೆಲವು ವಿಚಾರಗಳಲ್ಲಿ ಕಠಿಣವಾಗಿರುತ್ತಿದ್ದರು. ಭ್ರಷ್ಟಸಂಪತ್ತನ್ನು ಯಾವತ್ತೂ ಸ್ವೀಕರಿಸುತ್ತಿರಲಿಲ್ಲ. ಪೂಜ್ಯರ ಸೇವಾಸಕ್ತಿ ಸಮುದ್ರದಷ್ಟು ಆಳ, ಆಕಾಶದಷ್ಟು ಎತ್ತರವಾಗಿತ್ತು ಎಂದು ತಿಳಿಸಿದರು.

ಮಾದಹಳ್ಳಿ ಶ್ರೀ ಉಕ್ಕಿನಕಂತೆ ಮಠದ ಶ್ರೀ ಸಾಂಬಸದಾಶಿವ ಸ್ವಾಮಿಗಳು ಅಧ್ಯಕ್ಷತೆ ವಹಿಸಿ ಶುಭ ಸಂದೇಶ ನೀಡಿದರು. ಕು. ಎನ್. ಚೂಡಾಮಣಿ ವಚನಗಾಯನವನ್ನು ನಡೆಸಿಕೊಟ್ಟರು. ಸಾಹಿತಿ ಶ್ರೀ ನಗರ್ಲೆ ಶಿವಕುಮಾರ ಸ್ವಾಗತಿಸಿದರು. ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗದ ಅಧ್ಯಕ್ಷರಾದ ಶ್ರೀಮತಿ ಎಂ.ಎ. ನೀಲಾಂಬಿಕಾ ನಿರೂಪಣೆ ಹಾಗೂ ವಂದನಾರ್ಪಣೆ ಮಾಡಿದರು. ಶ್ರೀಮತಿ ಎಸ್. ನಾಗಮ್ಮ ಷಡಕ್ಷರಿಯವರು ಪ್ರಾಯೋಜಕತ್ವ ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ನಾಗರಿಕರು, ಜಿಜ್ಞಾಸುಗಳು ಭಾಗವಹಿಸಿದ್ದರು.

## ಶಿಬಿರಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಸುತ್ತೂರು ಶ್ರೀಕ್ಷೇತ್ರದಲ್ಲಿ ವಿವಿಧ ಶಿಬಿರಗಳು ನೆರವೇರಿದವು. ಶಿಬಿರಾರ್ಥಿಗಳು ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸ, ಸಾಯಂಕಾಲ ದೇಸಿ ಆಟಗಳಲ್ಲಿ ಪಾಲ್ಗೊಂಡರು. ಸುತ್ತೂರು ದರ್ಶನದಲ್ಲಿ ಶ್ರೀಮಠದ ಗುರುಪರಂಪರೆಯ ಅನಿಮೇಷನ್ ಸಾಕ್ಷ್ಯಚಿತ್ರವನ್ನು ವೀಕ್ಷಿಸಿದರು. ಮೂಲಮಠ, ಶ್ರೀ ಸೋಮೇಶ್ವರ ದೇವಸ್ಥಾನ, ಶ್ರೀ ಮಹದೇಶ್ವರರು ರಾಗಿ ಬೀಸಿದ ಕಲ್ಲು ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳ ದರ್ಶನ ಪಡೆದರು. ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಳೆಗಳ ಮಾಹಿತಿಯನ್ನು ಪಡೆದು ಗೋಶಾಲೆ ವೀಕ್ಷಿಸಿದರು. ಸಂಜೆಯ ಪ್ರಾರ್ಥನೆಯ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಕಪಿಲಾ ನದಿ ತೀರದಲ್ಲಿ ಪ್ರಾರ್ಥನೆ ಹಾಗೂ ಕಪಿಲಾರತಿ ಕಾರ್ಯಕ್ರಮವು ಶ್ರದ್ಧಾ ಭಕ್ತಿಗಳಿಂದ ನೆರವೇರಿತು.

### ಶಿಕ್ಷಕರ ಶಿಬಿರ

## ಒತ್ತಡ ನಿವಾರಣೆಗೆ ಶಿಬಿರಗಳು ಪೂರಕವಾಗಿವೆ




ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿಕ್ಷಕರಿಗಾಗಿ ಆಯೋಜಿಸಿದ್ದ ಶಿಬಿರವನ್ನು ಬೆಂಗಳೂರಿನ ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಮಿಷನ್ನಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಎಸ್. ಕಾತ್ಯಾಯಿನಿದೇವಿಯವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಶ್ರೀ ಎಂ. ಶಿವಮಾದಪ್ಪ, ಶ್ರೀ ಜಿ.ಎಲ್. ತ್ರಿಪುರಾಂತಕ, ಶ್ರೀಮತಿ ರಶ್ಮಿ ಕೋಟಿ, ಶ್ರೀ ಅಶೋಕ ಹಂಚಲಿ ಹಾಗೂ ಶ್ರೀ ರೇಣುಕಸ್ವಾಮಿಯವರಿದ್ದಾರೆ. (4 ಏಪ್ರಿಲ್ 2026)

ಒತ್ತಡ ನಿವಾರಣೆಗೆ ಶಿಬಿರಗಳು ಪೂರಕವಾಗಲಿ ಎಂದು ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಮಿಷನ್ನಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಎಸ್.ಕಾತ್ಯಾಯಿನಿದೇವಿಯವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 4.4.2026ರಂದು ಶಿಕ್ಷಕರ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಒತ್ತಡದ ಬದುಕು ಸಮಾಜದ ಎಲ್ಲಾ ವರ್ಗದ ಜನರ ಮೇಲೆ ಪರಿಣಾಮ ಬೀರಿ ಅನೇಕ ರೋಗಗಳಿಗೆ ಮೂಲವಾಗಿದೆ. ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ನಕಾರಾತ್ಮಕ ಆಲೋಚನೆಗಳನ್ನು ದೂರಮಾಡಿ ಧನಾತ್ಮಕ ಚಿಂತನೆಗಳನ್ನು ರೂಢಿಸಿಕೊಳ್ಳಬೇಕು. ಈ ಶಿಬಿರದಲ್ಲಿ ಆಯೋಜಿಸಿರುವ ಕಾರ್ಯಕ್ರಮಗಳು ಇದಕ್ಕೆ

ಪೂರಕವಾಗಿದೆ. ಶ್ರೀಮಠದ ದೈವಿಕ ಪರಿಸರದಲ್ಲಿ ಪಡೆಯುವ ಅನುಭವವೇ ಅನನ್ಯವಾದುದು ಎಂದು ಹೇಳಿದರು.

ಮೈಸೂರಿನ ಆಂದೋಲನ ಪತ್ರಿಕೆಯ ಶ್ರೀಮತಿ ರಶ್ಮಿ ಕೋಟಿಯವರು, ಶಿಕ್ಷಣ ಸಂಸ್ಥೆಯ ಗುಣಮಟ್ಟವನ್ನು ಅಳೆಯುವುದು ಅಲ್ಲಿನ ಶಿಕ್ಷಕರಿಂದ. ಶಿಕ್ಷಣ ಪರೀಕ್ಷೆಗೆ ಸೀಮಿತವಲ್ಲ. ಮಕ್ಕಳಿಗೆ ಬದುಕಿನ ಎಲ್ಲ ಸವಾಲುಗಳನ್ನು ಎದುರಿಸುವ, ಗೆಲುವು ಮತ್ತು ಸೋಲನ್ನು ಸಮಚಿತ್ತದಿಂದ ಸ್ವೀಕರಿಸುವ, ಆತ್ಮವಿಶ್ವಾಸ ತುಂಬುವ ಶಕ್ತಿಯಾಗಬೇಕು. ಇದರಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾದದ್ದು. ಭಿನ್ನ ಸಾಮರ್ಥ್ಯದಿಂದ ಕೂಡಿರುವ ವಿದ್ಯಾರ್ಥಿಗಳ ಮನಸ್ಥಿತಿಗೆ ಅನುಗುಣವಾಗಿ ಬೋಧಿಸುವ ಕಲೆಯನ್ನು ಶಿಕ್ಷಕರು ರೂಢಿಸಿಕೊಳ್ಳಬೇಕು, ಆಗ ಮಾತ್ರ ಶಿಕ್ಷಕ ವೃತ್ತಿ ಆತ್ಮ ತೃಪ್ತಿ ನೀಡುತ್ತದೆ ಎಂದು ನುಡಿದರು.

ಬಸವನಬಾಗೇವಾಡಿಯ ಅಕ್ಕನಾಗಮ್ಮ ಪ್ರೌಢಶಾಲೆಯ ಶಿಕ್ಷಕರಾದ ಶ್ರೀ ಅಶೋಕ ಹಂಚಲಿಯವರು, ನಮ್ಮ ರಾಷ್ಟ್ರದ ಭವಿಷ್ಯ ಶಾಲಾ ಕೊಠಡಿಗಳಲ್ಲಿ ನಿರ್ಮಾಣವಾಗುತ್ತದೆ. ಮಕ್ಕಳಲ್ಲಿ ದೇಶಭಕ್ತಿ, ಕರುಣೆ, ಅನುಕಂಪ, ಪ್ರೀತಿ ಮೊದಲಾದ ಮೌಲ್ಯಗಳನ್ನು ತುಂಬಬೇಕು. ಭಾರತದ ಸಂಸ್ಕೃತಿ ಪ್ರಪಂಚದಲ್ಲಿಯೇ ಶ್ರೇಷ್ಠವಾಗಿದ್ದು, ಮಕ್ಕಳು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸಬೇಕು. ವೇದ, ಉಪನಿಷತ್ತು, ವಚನ ಸಾಹಿತ್ಯದಲ್ಲಿ ಅಪಾರ ಜ್ಞಾನವಿದ್ದು, ಅವುಗಳನ್ನು ಅಭ್ಯಾಸಿಸಬೇಕು. ಪ್ರಸ್ತುತ ಸಮಾಜದಲ್ಲಿ ಹೆಚ್ಚು ಬುದ್ಧಿವಂತ ಮಕ್ಕಳಿದ್ದಾರೆ. ಆದರೆ ಹೃದಯವಂತರ ಸಂಖ್ಯೆ ಕಡಿಮೆಯಾಗಿದೆ. ಆ ನಿಟ್ಟಿನಲ್ಲಿ ಮಕ್ಕಳ ಹೃದಯದಲ್ಲಿ ಉತ್ತಮ ಅಂಶಗಳನ್ನು ಬಿತ್ತಿ ವಿಶಾಲ ಮನೋಭಾವ ಬೆಳೆಸಬೇಕು. ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕ ನೆಲಗಟ್ಟಿನಲ್ಲಿ ಪ್ರಪಂಚಕ್ಕೆ ದಾರಿ ತೋರುವ ಬೆಳಕಾಗಿದೆ ಎಂದು ತಿಳಿಸಿದರು.

ಮೈಸೂರಿನ ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಉಪ ಆಯುಕ್ತರಾದ ಶ್ರೀ ರಮೇಶ ನರಸಯ್ಯರವರು, ಶಿಕ್ಷಕ ವೃತ್ತಿ ಎಲ್ಲಾ ವೃತ್ತಿಗಳ ಮಾತೃ. ಇದು ಮುಂದಿನ ಪೀಳಿಗೆಗೆ ಹಾಗೂ ಸಮಾಜಕ್ಕೆ ಮಾರ್ಗದರ್ಶಕವಾಗಿದೆ. ಶಿಕ್ಷಕರು ತಮ್ಮ ವೃತ್ತಿಗೆ ನ್ಯಾಯ ಒದಗಿಸಲು ಉಲ್ಲಾಸದಿಂದ ಇರಬೇಕು. ಆರೋಗ್ಯಯುತವಾದ ಜೀವನಕ್ಕೆ ಮತ್ತು ಸಾಧನೆ ಮಾಡಲು, ದೈಹಿಕ ಹಾಗೂ ಮಾನಸಿಕವಾಗಿ ಆರೋಗ್ಯವಾಗಿರಲು ಜೀವನದಲ್ಲಿ ಉಲ್ಲಾಸವಿರಬೇಕು, ಇದಕ್ಕಾಗಿ ಶಿಕ್ಷಕರಲ್ಲಿ ಕಲಿಕಾಸಕ್ತಿ ಇರಬೇಕು. ಅತಿಯಾದ ಸ್ಪರ್ಧೆ ಹಾಗೂ ಒತ್ತಡ ಕಲಿಕಾಸಕ್ತಿಯನ್ನು ಕಡಿಮೆ ಮಾಡುತ್ತದೆ, ಅದಕ್ಕಾಗಿ ಜೀವನ ಶೈಲಿಯಲ್ಲಿ ಬದಲಾವಣೆ ಮಾಡಿಕೊಂಡು ಸಕಾರಾತ್ಮಕ ಆಲೋಚನೆಗಳಿಂದ ಜೀವನ ನಡೆಸಬೇಕು ಎಂದು ಹೇಳಿದರು.

ಶ್ರೀಮತಿ ಎಂ.ಆರ್. ಪ್ರತಿಮಾ ಪ್ರಾರ್ಥಿಸಿದರು. ಶ್ರೀಮತಿ ಎಂ. ದೇವಿಕಾ ಸ್ವಾಗತಿಸಿದರು. ಶ್ರೀ ಎಸ್.ವಿ. ಚೇತನ್ ಕುಮಾರ್ ವಂದಿಸಿದರು. ಶ್ರೀ ಹೆಚ್.ಎಂ. ಚೇತನ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಹತ್ತು ಮತ್ತರ ಭೂಮಿ, ಬತ್ತದ
ಹಯನು, ನಂದಾದೀವಿಗೆಯ
ನಡೆಸಿಹೆವೆಂಬವರ ಮುಖವ ನೋಡಲಾಗದು
ಅವರ ನುಡಿಯ ಕೇಳಲಾಗದು
ಅಂಡಜ, ಸ್ವೇದಜ, ಉದ್ಭಿಜ
ಜರಾಯುಜವೆಂಬ ಪ್ರಾಣಿಗಳಿಗೆ
ಭವಿತವ್ಯವ ಕೊಟ್ಟವರಾರೊ
ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿದಂತೆ
ಎನ್ನಿಂದಲೆ ಆಯಿತ್ತು, ಎನ್ನಿಂದಲೆ ಹೋಯಿತ್ತು
ಎಂಬವನ ಬಾಯಲ್ಲಿ
ಮೆಟ್ಟ ಹುಡಿಯ ಹೊಯ್ಯದೆ ಮಾಬನೆ
ಕೂಡಲಸಂಗಮದೇವ

ಬಸವಣ್ಣ

# ಗುರಿ ಸಾಧನೆಗೆ ಶಿಸ್ತು ಮತ್ತು ಸಮಯಪ್ರಜ್ಞೆ ಅಗತ್ಯ



ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಶಿಕ್ಷಕರ ಶಿಬಿರದಲ್ಲಿ ಶ್ರೀ ಎಸ್. ಸ್ವಾಮಿಯವರು ಹಾಗೂ ಶ್ರೀ ಎಂ. ಸತೀಶ್‌ಕುಮಾರ್‌ರವರು ಉಪನ್ಯಾಸ ನೀಡುತ್ತಿರುವುದು. (5 ಏಪ್ರಿಲ್ 2026)

ಗುರಿ ಸಾಧನೆಗೆ ಶಿಸ್ತು ಮತ್ತು ಸಮಯಪ್ರಜ್ಞೆಗಳು ಅಗತ್ಯ ಎಂದು ರಾಮನಗರ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಎಸ್. ಸ್ವಾಮಿಯವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 5.4.2026 ರಂದು ಶಿಕ್ಷಕರ ಶಿಬಿರದಲ್ಲಿ ಅವರು ಮಾತನಾಡುತ್ತಾ, ಶಿಸ್ತು ಆಸೆಗಳನ್ನು ನಿಯಂತ್ರಿಸಿ, ದೈಹಿಕ ಮತ್ತು ಮಾನಸಿಕ ನಡವಳಿಕೆಯನ್ನು ಉತ್ತಮಪಡಿಸಿ, ವ್ಯಕ್ತಿಯನ್ನು ಸರಿಯಾದ ಮಾರ್ಗದಲ್ಲಿ ನಡೆಸುವ ಕಲೆಯಾಗಿದೆ. ಸಮಯಪಾಲನೆಯು ಒಂದು ಮನಸ್ಥಿತಿಯಾಗಿದ್ದು, ವ್ಯಕ್ತಿಯ ಕಲಿಕಾ ಮನೋಭಾವ ಮತ್ತು ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಇತರರ ಸಮಯಕ್ಕೆ ಗೌರವ ಕೊಡುವುದನ್ನು ನಾವು ಕಲಿಯಬೇಕು. ಒಂದು ದೇಶದ ಅಭಿವೃದ್ಧಿಯು ಪ್ರತಿಯೊಬ್ಬ ಪ್ರಜೆಯ ಶಿಸ್ತು ಮತ್ತು ಸಮಯಪ್ರಜ್ಞೆಯ ಮೂಲಕ ಸಾಧ್ಯ. ಮಹಾನಾಯಕ ಲಿಕ್ವಾನಿಯೋರವರ ಶಿಸ್ತುಬದ್ಧ ಜೀವನ ಮತ್ತು ಸಮಯಪ್ರಜ್ಞೆಯಿಂದ ಸಿಂಗಾಪುರ ಜಗತ್ತಿನಲ್ಲೇ ಮುಂದುವರೆದ ದೇಶವಾಗಿ ಹಾಗೂ ಪ್ರವಾಸೋದ್ಯಮ ಕೇಂದ್ರವಾಗಿ ಬೆಳೆದಿದೆ. ಬಿಹಾರದ ದಶರಥ ಮಾಂಝಿಯಂತೆ ಪ್ರತಿಯೊಬ್ಬ ಶಿಕ್ಷಕ ಸಮಯಪ್ರಜ್ಞೆ, ಶಿಸ್ತು, ತ್ಯಾಗ, ಶ್ರದ್ಧೆ, ಸಹನೆ, ಸಮನ್ವಯ ಮತ್ತು ಪರಿಶ್ರಮಗಳನ್ನು ರೂಢಿಸಿಕೊಂಡು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ಚಿಕ್ಕಬಳ್ಳಾಪುರದ ಶಿಕ್ಷಣ ಸಂಯೋಜಕರಾದ ಶ್ರೀ ಎಂ. ಸತೀಶ್‌ಕುಮಾರ್‌ರವರು ಮನುಷ್ಯ ಮನುಷ್ಯನನ್ನು ಪ್ರೀತಿಸುವ ಗುಣವನ್ನು ಮಕ್ಕಳಲ್ಲಿ ಬೆಳೆಸಬೇಕು. ವಿದ್ಯಾರ್ಥಿಯ ಕಲಿಕಾ ಪ್ರಕ್ರಿಯೆ, ವರ್ತನೆ, ಬುದ್ಧಿಶಕ್ತಿ ಮತ್ತು ವಿಕಾಸವನ್ನು ಅರ್ಥ ಮಾಡಿಕೊಳ್ಳಲು ಮನೋವಿಜ್ಞಾನವು ಸಹಕಾರಿಯಾಗಿವೆ. ಮನೋವಿಜ್ಞಾನವು ಬೋಧನೆಯನ್ನು ಕೇವಲ ಒಂದು ಕೆಲಸವನ್ನಾಗಿ ಮಾಡದೆ, ಅದನ್ನೊಂದು ಕಲೆಯನ್ನಾಗಿ ಪರಿವರ್ತಿಸುತ್ತದೆ. ಪ್ರೀತಿ ಮತ್ತು ಸಹಾನುಭೂತಿಯಿಂದ ಮಕ್ಕಳನ್ನು ತಿದ್ದಲು ಮನೋವಿಜ್ಞಾನವು ಪ್ರೇರೇಪಿಸುತ್ತದೆ ಎಂದು ಹೇಳಿದರು.

# ತರಬೇತಿ ನಿತ್ಯ ಹಾಗೂ ನಿರಂತರವಾಗಿರಬೇಕು







ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಶಿಕ್ಷಕರ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶ್ರೀ ರವಿ ಎಂ. ತಿರ್ಲಾಪುರರವರು ಮಾತನಾಡಿದರು. ಶ್ರೀ ಎಂ. ಶಿವಮಾದಪ್ಪ, ಶ್ರೀ ಎಸ್.ಪಿ. ಉದಯಶಂಕರ್‌ರವರುಗಳಿದ್ದಾರೆ. ಸಮೂಹ ಚಿತ್ರದಲ್ಲಿ ಶಿಬಿರಾರ್ಥಿಗಳು, ಸಂಚಾಲಕರುಗಳು ಹಾಗೂ ಸಂಸ್ಥೆಯ ಅಧಿಕಾರಿಗಳಿದ್ದಾರೆ. (6 ಏಪ್ರಿಲ್ 2026)

ತರಬೇತಿ ನಿತ್ಯ ಹಾಗೂ ನಿರಂತರವಾಗಿರಬೇಕು ಎಂದು ಕರ್ನಾಟಕ ಸರ್ಕಾರದ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳಾದ ಶ್ರೀ ರವಿ ಎಂ. ತಿರ್ಲಾಪುರರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 6.4.2026 ರಂದು ನಡೆದ ಶಿಕ್ಷಕರ ಶಿಬಿರದ ಸಮಾರೋಪ ಭಾಷಣ ಮಾಡುತ್ತಾ ಅವರು ತಿಳಿಸಿದರು. ಶಿಕ್ಷಕ ನಿತ್ಯ ವಿದ್ಯಾರ್ಥಿ. ಹೊಸತನಗಳನ್ನು ತಿಳಿಯಲು ಪ್ರಯತ್ನಿಸಬೇಕು. ಬದಲಾವಣೆಗಳಿಗೆ ಹೊಂದಿಕೊಂಡು ಬದುಕುವ ಕೌಶಲವನ್ನು ರೂಢಿಸಿಕೊಳ್ಳಬೇಕು. ಎಷ್ಟೇ ಅನುಭವ ಇದ್ದರೂ ತರಗತಿಗಳಿಗೆ ಸೂಕ್ತ ತಯಾರಿಯೊಂದಿಗೆ ಹೋಗಬೇಕು. ಉತ್ತಮ ಸಂವಹನ ಕೌಶಲಗಳೊಂದಿಗೆ ಸ್ಪಷ್ಟವಾಗಿ ಬೋಧಿಸಬೇಕು. ವಿದ್ಯಾರ್ಥಿಗಳಿಗೆ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸಬೇಕು. ಶಿಬಿರಗಳಿಂದ ಶಿಸ್ತು, ಸಮಯಪ್ರಜ್ಞೆ, ನವೀನ ಕೌಶಲಗಳು ಹಾಗೂ ಸಹಕಾರ ಕಲಿಕೆ ಮುಂತಾದವು ಬೆಳೆಯುತ್ತವೆ. ಇವು ಶಿಕ್ಷಕರ ಬೆಳವಣಿಗೆಗೆ ಸಹಕಾರಿಯಾಗುತ್ತವೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ ಸಹ ನಿರ್ದೇಶಕರಾದ ಶ್ರೀ ಎಂ. ಶಿವಮಾದಪ್ಪನವರು ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕಾ ಮಟ್ಟದ ಬಗ್ಗೆ ಶಿಕ್ಷಕರಿಗೆ ಅರಿವಿರಬೇಕು. ಬದಲಾಗುತ್ತಿರುವ ಸನ್ನಿವೇಶಗಳಿಗೆ ಅನುಗುಣವಾಗಿ ತನ್ನ ಬೋಧನಾ ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಂಡು ಬೋಧಿಸಬೇಕು. ವಿಷಯದ ಪರಿಕಲ್ಪನೆಗಳನ್ನು ಮಕ್ಕಳಿಗೆ ಮನಮುಟ್ಟುವಂತೆ ತಿಳಿಸಬೇಕು ಹಾಗೂ ಶಿಕ್ಷಕರು ವಿದ್ಯಾರ್ಥಿಗಳಿಗೆ ಸದಾ ಆದರ್ಶಪ್ರಾಯರಾಗಬೇಕೆಂದು ತಿಳಿಸಿದರು.

ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ.

ಉದಯಶಂಕರ್‌ರವರು, ಶಿಬಿರದಲ್ಲಿ ಕಲಿತ ವಿಷಯಗಳನ್ನು ಮೂರು ದಿನಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ಜೀವನಪರ್ಯಂತ ಅಳವಡಿಸಿಕೊಳ್ಳುವುದು ಸೂಕ್ತ. ಶ್ರೀಕ್ಷೇತ್ರದಲ್ಲಿ ನಡೆಯುವ ಶಿಬಿರಗಳು ಎಲ್ಲರೂ ಬೆರೆಯಲು ಸಹಕಾರಿಯಾಗಿವೆ ಎಂದು ನುಡಿದರು.

ಬೆಂಗಳೂರು ದಕ್ಷಿಣ ಜಿಲ್ಲೆಯ ಶಾಲಾ ಶಿಕ್ಷಣ ಉಪಯೋಜನಾ ಸಮನ್ವಯಾಧಿಕಾರಿಗಳಾದ ಡಾ. ಎಸ್. ವಿಶ್ವನಾಥ್‌ರವರು, ವಿದ್ಯಾರ್ಥಿಗಳಲ್ಲಿ ಸಮಾಜ ಒಪ್ಪುವಂತಹ ನೈತಿಕ ನಿಲುವುಗಳನ್ನು ಬೆಳೆಸುವುದು ಶಿಕ್ಷಕರ ಕರ್ತವ್ಯ. ಪ್ರಾಮಾಣಿಕತೆ, ಸಹಾನುಭೂತಿ, ಕರುಣೆ, ಸಹನಶೀಲತೆ, ಭಾವನಾತ್ಮಕತೆ ಮೊದಲಾದ ನೈತಿಕ ಅಂಶಗಳನ್ನು ಬೆಳಸಬೇಕು ಎಂದು ಹೇಳಿದರು.

ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯದ ಡೆಪ್ಯೂಟಿ ರಿಜಿಸ್ಟ್ರಾರ್ ಡಾ. ಬಿ.ಎಸ್ ಹರೀಶ್‌ರವರು ಸಾಮಾನ್ಯರ ಪರಿಭಾಷೆಯಲ್ಲಿ ಹೇಳುವುದಾದರೆ, ಕೃತಕ ಬುದ್ಧಿಶಕ್ತಿ ಮಾನವನಂತೆ ವರ್ತಿಸುವ ಯಂತ್ರ. ಅವು ಮಾನವನಂತೆಯೇ ಕಲಿಯುತ್ತವೆ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ. ಕೃತಕ ಬುದ್ಧಿಶಕ್ತಿಯು ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಹೊಸತನವನ್ನು ನೀಡುತ್ತದೆ. ಈ ತಂತ್ರಜ್ಞಾನವು ಮಾನವನ ಎಲ್ಲಾ ಕ್ಷೇತ್ರಗಳ ಮೇಲೆ ಪ್ರಭಾವ ಬೀರುತ್ತಿದೆ. ಇದರ ಧನಾತ್ಮಕ ಉಪಯೋಗಗಳನ್ನು ಪಡೆದುಕೊಳ್ಳಬೇಕೆಂದರು.

ಶ್ರೀ ಸಿ.ಎಸ್ ನಾಗೇಶ್, ಶ್ರೀ ಎಂ. ಮಂಜುನಾಥ್, ಶ್ರೀಮತಿ ಎಂ. ಮಾದಲಾಂಬಿಕ, ಶ್ರೀಮತಿ ಕೆ.ಎಂ. ದಿವ್ಯ, ಶ್ರೀಮತಿ ಎಂ. ಸೌಜನ್ಯರವರುಗಳು ಶಿಬಿರವನ್ನು ಕುರಿತು ಅನಿಸಿಕೆಯನ್ನು ಹಂಚಿಕೊಂಡರು. ಶ್ರೀಮತಿ ಎಸ್. ಸೌಮ್ಯರವರು ಶಿಬಿರದ ವರದಿ ಮಂಡಿಸಿದರು.

ಶ್ರೀ ಎಂ. ಸುರೇಶ್ ಪ್ರಾರ್ಥಿಸಿದರು. ಶ್ರೀ ಟಿ.ಎಸ್ ಗಿರೀಶ್ ಸ್ವಾಗತಿಸಿದರು. ಶ್ರೀ ಎನ್.ಪಿ ಸತೀಶ್ ವಂದಿಸಿದರು. ಶ್ರೀ ಪುಟ್ಟಮಾದಪ್ಪ ನಿರೂಪಿಸಿದರು. ಶಿಬಿರದಲ್ಲಿ 160 ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

**ಮಾಸಿಕ ಸಾಮೂಹಿಕ ವಿವಾಹ 2026**
**ಸುತ್ತೂರು ಶ್ರೀಕ್ಷೇತ್ರ**



**ಜೂನ್ 18 ಗುರುವಾರ**

ವಿವರಗಳಿಗೆ ಸಂಪರ್ಕಿಸಿ :
ಆಡಳಿತಾಧಿಕಾರಿಗಳು
ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು
ದೂರವಾಣಿ : 08221–232223, 232224

## ಆಯುರ್ವೇದ, ವಾಕ್-ಶ್ರವಣ ಮತ್ತು ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರ

# ಸಂಸ್ಕಾರ ಮತ್ತು ಕೌಶಲ್ಯಗಳ ಸಮನ್ವಯವೇ ಶಿಕ್ಷಣದ ಗುರಿ




ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಆಯುರ್ವೇದ, ವಾಕ್-ಶ್ರವಣ ಮತ್ತು ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರವನ್ನು ಬೆಂಗಳೂರಿನ ಎಸ್-ವ್ಯಾಸ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳಾದ ಡಾ. ಬಿ. ಆರ್. ರಾಮಕೃಷ್ಣರವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಶ್ರೀ ಆರ್. ಮಹೇಶ್, ಶ್ರೀ ಸುಭಾಷ್ ಹೂಗಾರ್, ಡಾ. ಸಂತೋಷ್ ಸುಭಾಷ್ ಇಂಡಿ, ಸಂಚಾಲಕರು ಹಾಗೂ ಶಿಬಿರಾರ್ಥಿಗಳಿದ್ದಾರೆ. (8 ಏಪ್ರಿಲ್ 2026)

ಸಂಸ್ಕಾರ ಮತ್ತು ಕೌಶಲ್ಯಗಳ ಸಮನ್ವಯವೇ ಶಿಕ್ಷಣದ ಗುರಿ ಎಂದು ಬೆಂಗಳೂರಿನ ಎಸ್-ವ್ಯಾಸ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳಾದ ಡಾ. ಬಿ. ಆರ್. ರಾಮಕೃಷ್ಣರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 8.4.2026 ರಂದು ನಡೆದ ಆಯುರ್ವೇದ, ವಾಕ್-ಶ್ರವಣ, ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಉತ್ತಮ ನಾಗರಿಕರನ್ನು ನಿರ್ಮಿಸುವುದು ಶಿಕ್ಷಣದ ಗುರಿ. ಕಲಿಯುವಾಗ ಮೌಲ್ಯಗಳನ್ನು ಅರಿತು ಪ್ರಾಯೋಗಿಕ ಅಂಶಗಳನ್ನು ತಿಳಿಯಬೇಕು. ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಆರೋಗ್ಯಕರ ಮನಸ್ಸನ್ನು ಹೊಂದಿ ದುಶ್ಚಟಗಳಿಂದ ದೂರವಿರಬೇಕು. ಶ್ರೀಮಠದ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ವಿವಿಧ ಧರ್ಮ ಹಾಗೂ ರಾಜ್ಯಗಳವರಿದ್ದರೂ ಅವರಲ್ಲಿ ಐಕ್ಯತೆ ಮೂಡಿಸಿ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುತ್ತಿರುವುದು ಸ್ವಾಗತಾರ್ಹ ಎಂದು ತಿಳಿಸಿದರು.

ಬೆಂಗಳೂರಿನ ಹಿರಿಯ ಪತ್ರಕರ್ತರಾದ ಶ್ರೀ ಸುಭಾಷ್ ಹೂಗಾರ್‌ರವರು, ಪ್ರಸ್ತುತ ಪ್ರತಿಯೊಂದು ಕ್ಷೇತ್ರವು ವ್ಯವಹಾರಿಕವಾಗಿದೆ. ಕಲಿತ ವಿಷಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ಬದುಕುವ ಕಲೆಯನ್ನು ರೂಪಿಸಿಕೊಳ್ಳಬೇಕು. ಬದಲಾಗುತ್ತಿರುವ ಸನ್ನಿವೇಶಕ್ಕೆ ಅನುಗುಣವಾಗಿ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ಉತ್ತಮ ಗುರಿಯೊಂದಿಗೆ ಮುನ್ನಡೆದು ಬೇರೆಯವರಿಗೆ

ಮಾದರಿಯಾಗಬೇಕು. ಪ್ರಬುದ್ಧತೆ, ಸಹಾನುಭೂತಿ, ಆತ್ಮವಿಮರ್ಶೆಗಳು ಯಶಸ್ಸಿಗೆ ಸಹಕಾರಿಯಾಗುತ್ತವೆ ಎಂದು ನುಡಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು, ದೃಢಮನಸ್ಸು ಮತ್ತು ಅವಿರತವಾದ ಶ್ರಮದಿಂದ ವೃತ್ತಿಯಲ್ಲಿ ಯಶಸ್ಸು ದೊರೆಯುತ್ತದೆ. ಸಾಮಾಜಿಕ ಮಾಧ್ಯಮಗಳ ಬಳಕೆಯಲ್ಲಿ ಮಿತಿ ಇರಬೇಕು ಎಂದು ತಿಳಿಸಿದರು.

ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾದ ಡಾ. ಸಂತೋಷ್ ಸುಭಾಷ್ ಇಂಡಿಯವರು, ವೈದ್ಯಕೀಯ ಕ್ಷೇತ್ರದ ವಿದ್ಯಾರ್ಥಿಗಳು ಸಮಾಜಕ್ಕೆ ಅತ್ಯುತ್ತಮ ಕೊಡುಗೆಯನ್ನು ನೀಡುತ್ತಿದ್ದಾರೆ. ಯಾವುದೇ ವೃತ್ತಿಯನ್ನು ನಿರ್ವಹಿಸುವಾಗ ಸಮಯ ಪ್ರಜ್ಞೆ, ಶಿಸ್ತು, ಆತ್ಮವಿಶ್ವಾಸ ಮತ್ತು ಭಾವನಾತ್ಮಕತೆ ಇರಬೇಕು. ವಿದ್ಯಾರ್ಥಿಗಳು ನಾಯಕತ್ವದ ಗುಣ ಬೆಳೆಸಿಕೊಂಡು ಗುರಿಯತ್ತ ಸಾಗಬೇಕು. ನಮ್ಮೆಲ್ಲಾ ನಿರ್ಧಾರಗಳಿಗೂ ಮನಸ್ಸೇ ಮೂಲವಾಗಿರುವುದರಿಂದ ಮಾನಸಿಕ ಸ್ಥಿತಿಯನ್ನು ಸ್ಥಿರವಾಗಿಟ್ಟುಕೊಳ್ಳಲು ಇಂತಹ ಶಿಬಿರಗಳು ಸಹಕಾರಿ ಎಂದು ತಿಳಿಸಿದರು.

ಶ್ರೀಮತಿ ಗೀತಾ ಆರ್ ಶಾರವರು ಭಾರತೀಯ ಸಂಸ್ಕೃತಿ ವಿಶ್ವದಲ್ಲಿಯೇ ವಿಶಿಷ್ಟವಾದದ್ದಾಗಿದ್ದು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದೆ. ಧರ್ಮ, ಭಾಷೆ, ಉಡುಗೆ ತೊಡುಗೆ, ಆಚಾರ ವಿಚಾರಗಳಲ್ಲಿ ಭಿನ್ನತೆಗಳಿದ್ದರೂ ಸಹಿಷ್ಣುತೆ ಮನೋಭಾವವನ್ನು ಹೊಂದಿರುತ್ತದೆ. ಗುರು ಹಿರಿಯರಿಗೆ ಗೌರವ ನೀಡುವುದು. ಅತಿಥಿ ಸತ್ಕಾರ, ಕರುಣೆ, ಸಂಬಂಧಗಳಲ್ಲಿ ಸ್ಥಿರತೆ ನಮ್ಮ ಸಂಸ್ಕೃತಿಯ ಭಾಗವಾಗಿದೆ. ಇದನ್ನು ನಮ್ಮ ಮುಂದಿನ ಪೀಳಿಗೆಗೆ ವರ್ಗಾಯಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್‌ನ ಕು. ರಮ್ಯ ರಾಜಶೇಖರ್‌ರವರು ನಮ್ಮ ಪೂರ್ವಜರು ಒತ್ತಡರಹಿತವಾಗಿ ಜೀವಿಸುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಅತಿಯಾದ ಕಾರ್ಯ ಒತ್ತಡದಿಂದ ಮಾನಸಿಕ ಹಾಗೂ ದೈಹಿಕವಾಗಿ ಬಳಲುತ್ತಿದ್ದೇವೆ. ಒತ್ತಡ ನಿವಾರಣೆಗೆ ಯೋಗವು ದಿವ್ಯೌಷಧವಾಗಿದೆ. ಯೋಗವನ್ನು ದಿನನಿತ್ಯ ಹವ್ಯಾಸವಾಗಿ ರೂಢಿಸಿಕೊಂಡರೆ ಆರೋಗ್ಯಪೂರ್ಣವಾಗಿ ಚಟುವಟಿಕೆಯಿಂದ ಇರಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕು. ಜಾನ್ಹವಿ ಮತ್ತು ಕು. ರೋಹಿಣಿ ಪ್ರಾರ್ಥಿಸಿದರು. ಡಾ. ಎಂ.ಎಲ್. ರಾಜೇಂದ್ರಪ್ರಸಾದ್ ಸ್ವಾಗತಿಸಿದರು. ಶ್ರೀ ಡಿ.ಎನ್. ಗುರುಮಲ್ಲೇಶ್ ವಂದಿಸಿದರು. ಶ್ರೀ ಸಿ.ಎನ್. ಸುನೀಲ್‌ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

## ಧ್ಯಾನ-ಯೋಗದಿಂದ ದೇಹ ಮತ್ತು ಮನಸ್ಸಿನ ಸಮತೋಲನ ಸಾಧ್ಯ

ಧ್ಯಾನ-ಯೋಗದಿಂದ ದೇಹ ಮತ್ತು ಮನಸ್ಸಿನ ಸಮತೋಲನ ಸಾಧ್ಯ ಎಂದು ಮೈಸೂರಿನ ಪ್ರಾಣಯೋಗ ವಿದ್ಯಾಲಯದ ಸಂಸ್ಥಾಪಕರಾದ ಶ್ರೀ ಬಿ.ಯು. ಶರತ್‌ರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಆಯುರ್ವೇದ, ವಾಕ್-ಶ್ರವಣ, ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರದಲ್ಲಿ ದಿನಾಂಕ 8.4.2026 ರಂದು ಅವರು ತಂತ್ರಜ್ಞಾನದ ತಂತ್ರ ಮತ್ತು ಮನಸ್ಸಿನ ಮಂತ್ರ ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು. ಪ್ರಸ್ತುತ ದಿನಗಳಲ್ಲಿ ಎಲ್ಲಾ ಕಾರ್ಯಗಳು ತಾಂತ್ರಿಕತೆಯ ಮೇಲೆ ಹೆಚ್ಚು



ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಆಯುರ್ವೇದ, ವಾಕ್-ಶ್ರವಣ, ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರದಲ್ಲಿ ಶ್ರೀ ಬಿ.ಯು. ಶರತ್ ಹಾಗೂ ಕು. ಕೃತಾ ಎಸ್. ಮಲ್ಲಿಕಾರ್ಜುನ್‌ರವರುಗಳು ಉಪನ್ಯಾಸ ನೀಡಿದರು. (9 ಏಪ್ರಿಲ್ 2026)

ಅವಲಂಬಿತವಾಗಿವೆ. ಇದು ದೇಹ ಮತ್ತು ಮನಸ್ಸನ್ನು ಹಾಳುಮಾಡುತ್ತಿದೆ. ಮಾನಸಿಕ ಶಾಂತಿ, ಏಕಾಗ್ರತೆ, ಖಿನ್ನತೆ ನಿವಾರಣೆ ಹಾಗೂ ಸ್ಥಿರತೆಗಾಗಿ ಯೋಗ, ಧ್ಯಾನ, ಪ್ರಾಣಯಾಮಗಳು ಬಹಳ ಮುಖ್ಯವಾಗಿವೆ. ತಂತ್ರಜ್ಞಾನದ ತಂತ್ರ ಹಾಗೂ ಮನಸ್ಸಿನ ಮಂತ್ರ ಎಂಬುದು ಆಧುನಿಕ ಜೀವನದಲ್ಲಿ ಪ್ರಮುಖ ಅಂಶ. ತಂತ್ರಜ್ಞಾನವು ಹೊರಗಿನ ಪ್ರಗತಿಗೆ ಸಹಾಯ ಮಾಡುತ್ತದೆ. ಮಂತ್ರವು ಒಳಗಿನ ಮನಸ್ಸಿನ ಶಾಂತಿಗೆ ಸಹಾಯ ಮಾಡುತ್ತದೆ. ಎರಡೂ ಸೇರಿದಾಗ ಬದುಕು ಸಮೃದ್ಧಿಗೊಳ್ಳುತ್ತದೆ. ಇದರಿಂದ ದೈನಂದಿನ ಜೀವನದಲ್ಲಿ ಉತ್ಸಾಹ ಮತ್ತು ಶಕ್ತಿ ದೊರೆಯುತ್ತದೆ ಎಂದು ತಿಳಿಸಿದರು.

ಮೈಂಡ್ ಸೈನರ್ಜಿ ಸಂಸ್ಥೆಯ ನಿರ್ದೇಶಕರಾದ ಕು. ಕೃತಾ ಎಸ್ ಮಲ್ಲಿಕಾರ್ಜುನ್‌ರವರು, ಯಶಸ್ಸು ಪ್ರತಿಯೊಬ್ಬರ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದು ಸುಲಭವಾಗಿ ಸಿಗುವುದಿಲ್ಲ. ಅದಕ್ಕೆ ಶ್ರಮ, ಸಹನೆ ಮತ್ತು ಸಂಕಲ್ಪ ಅವಶ್ಯಕ. ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಧೈರ್ಯದಿಂದ ಎದುರಿಸಿದಾಗ ಮಾತ್ರ ಯಶಸ್ಸು ಜೊತೆಗೆ ಬರುತ್ತದೆ. ಕೆಲವೊಮ್ಮೆ ವಿಫಲತೆಗಳು ಎದುರಾಗಬಹುದು, ಆದರೆ ಅವು ಹೆಚ್ಚು ಬಲಿಷ್ಠರನ್ನಾಗಿ ಮಾಡುತ್ತವೆ. ವಿಫಲತೆಯಿಂದ ಪಾಠ ಕಲಿತು ಮತ್ತೆ ಪ್ರಯತ್ನಿಸುವುದು ಯಶಸ್ಸಿನ ಮುಂದಿನ ಮೆಟ್ಟಿಲು. ಭಯ ಮತ್ತು ಅತಿಯಾದ ಆತ್ಮವಿಶ್ವಾಸ ಯಶಸ್ಸಿನ ಶತ್ರುಗಳಾಗಿವೆ. ಅನಗತ್ಯ ಯೋಚನೆಗಳನ್ನು ಮಾಡದೆ ಹಾಗೂ ಬೇರೆಯವರೊಂದಿಗೆ ಹೋಲಿಕೆ ಮಾಡಿಕೊಳ್ಳದೆ ನಿರಂತರ ಪ್ರಯತ್ನದಿಂದ ಮುಂದುವರಿದರೆ ಯಶಸ್ಸು ಲಭಿಸುತ್ತದೆ ಎಂದರು.

ಗುರುವೆಂದರಿಯರು, ಹಿರಿಯರೆಂದರಿಯರು;
ದೇವರೆಂದರಿಯರು, ಭಕ್ತರೆಂದರಿಯರು;
ಲಿಂಗವೆಂದರಿಯರು, ಜಂಗಮವೆಂದರಿಯರು;
ಬಂದ ಬರವನರಿಯರು, ನಿಂದ ನಿಲವನರಿಯರು
ಶಿವಶರಣರ ನೋಯಿಸುವ ಪಾತಕರನೇನೆಂಬೆ ?
ಗುಹೇಶ್ವರಾ, ನಿಮ್ಮ ಮನ ನೊಂದ ನೋವು
ಬರಿದೆ ಹೋಗದು

ಅಲ್ಲಮಪ್ರಭುದೇವರು

### ಫಾರ್ಮಸಿ ಮತ್ತು ಲೈಫ್ ಸೈನ್ಸ್ ವಿದ್ಯಾರ್ಥಿಗಳ ಶಿಬಿರ

## ಕರ್ತವ್ಯ ನಿರ್ವಹಣೆಯಲ್ಲಿ ಸಮರ್ಪಣಾ ಭಾವ ಅತಿ ಮುಖ್ಯ



ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದ ಫಾರ್ಮಸಿ ಮತ್ತು ಲೈಫ್ ಸೈನ್ಸ್ ವಿದ್ಯಾರ್ಥಿಗಳ ಶಿಬಿರವನ್ನು ಮೈಸೂರಿನ ರಕ್ಷಣಾ ತಂತ್ರಜ್ಞಾನ ಸಂಸ್ಥೆಯ ಜೈವಿಕ ರಕ್ಷಣಾ ವಿಭಾಗದ ಮುಖ್ಯಸ್ಥರಾದ ಡಾ. ಆರ್. ಕುಮಾರ್‌ರವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಡಾ. ಸಲೀಂ ಉಲ್ಲಾ ಖಾನ್, ಸಂಚಾಲಕರು ಹಾಗೂ ಶಿಬಿರಾರ್ಥಿಗಳಿದ್ದಾರೆ. (12 ಏಪ್ರಿಲ್ 2026)

ಕರ್ತವ್ಯ ನಿರ್ವಹಣೆಯಲ್ಲಿ ಸಮರ್ಪಣಾ ಭಾವ ಅತಿ ಮುಖ್ಯವೆಂದು ರಕ್ಷಣಾ ತಂತ್ರಜ್ಞಾನ ಸಂಸ್ಥೆಯ ಜೈವಿಕ ರಕ್ಷಣಾ ವಿಭಾಗದ ಮುಖ್ಯಸ್ಥರಾದ ಡಾ. ಆರ್. ಕುಮಾರ್‌ರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದ ಫಾರ್ಮಸಿ ಹಾಗೂ ಲೈಫ್ ಸೈನ್ಸ್ ವಿದ್ಯಾರ್ಥಿಗಳ ಶಿಬಿರವನ್ನು ದಿನಾಂಕ 12.4.2026ರಂದು ಉದ್ಘಾಟಿಸಿ ಅವರು ಮಾತನಾಡಿದರು. ತಿಳಿಸಿದರು. ವೃತ್ತಿಯಲ್ಲಿ ಸಂವಹನವೇ ಪ್ರಮುಖ. ದೇಶಿ ಹಾಗೂ ವಿದೇಶಿ ಭಾಷೆಗಳನ್ನು ಕಲಿಯುವುದರಿಂದ ಲೋಕಜ್ಞಾನ ಜೊತೆಗೆ ಸಂವಹನವು ಸುಲಭವಾಗುತ್ತದೆ. ವೃತ್ತಿ ಮಿತ್ರರೊಂದಿಗೆ ಗೌರವ ಹಾಗೂ ಸಹಕಾರದಿಂದ ವರ್ತಿಸುವುದನ್ನು ಕಲಿಯಬೇಕು. ಫಾರ್ಮಸಿ ಹಾಗೂ ಲೈಫ್ ಸೈನ್ಸ್ ವಿದ್ಯಾರ್ಥಿಗಳಿಗೆ ಭಾರತೀಯ ರಕ್ಷಣಾ ಕ್ಷೇತ್ರದಲ್ಲೂ ಅನೇಕ ಅವಕಾಶಗಳಿದ್ದು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಶ್ರೀ ಸುತ್ತೂರು ಕ್ಷೇತ್ರದ ಪರಿಸರವು ಯೋಗ ಹಾಗೂ ಆಧ್ಯಾತ್ಮಿಕತೆಯನ್ನು ಕಲಿಯಲು ಸೂಕ್ತವಾಗಿದೆ ಎಂದು ತಿಳಿಸಿದರು.

ಭಾರತೀಯ ಫಾರ್ಮಸಿ ಮಂಡಳಿಯ ಕಾರ್ಯಕಾರಿ

ಸಮಿತಿಯ ಸದಸ್ಯರಾದ ಡಾ. ಸಲೀಂಉಲ್ಲಾ ಖಾನ್‌ರವರು ಮಾತನಾಡಿ, ಮನಸ್ಸನ್ನು ಪ್ರಶಾಂತವಾಗಿಟ್ಟುಕೊಳ್ಳಬೇಕು. ತಲೆಯಲ್ಲಿ ಅನಗತ್ಯ ವಿಚಾರಗಳನ್ನು ತುಂಬಿಕೊಳ್ಳದಿದ್ದಾಗ ಹೊಸ ವಿಷಯಗಳ ಕಲಿಕೆಗೆ ಸಹಾಯವಾಗುತ್ತದೆ. ಈ ಶಿಬಿರವು ಜೀವನದ ಬೇರೆ ಬೇರೆ ಆಯಾಮಗಳನ್ನು ಪರಿಚಯಿಸಿ ಪುನಶ್ಚೇತನಕ್ಕೆ ಸಹಕಾರಿಯಾಗುತ್ತದೆ ಎಂದು ಹೇಳಿದರು.

ಪ್ರಾಧ್ಯಾಪಕರಾದ ಪ್ರೊ. ಜಿ.ಆರ್. ಸ್ಮಿತಾರವರು ಭಾರತೀಯ ಸಂಸ್ಕೃತಿಯು ವೈಜ್ಞಾನಿಕ ನೆಲಗಟ್ಟಿನಿಂದ ಕೂಡಿದೆ. ವಿಜ್ಞಾನ ಹಾಗೂ ಖಗೋಳ ಶಾಸ್ತ್ರದೊಂದಿಗೆ ಇದು ಸಂಬಂಧ ಹೊಂದಿದ್ದು, ದೇವಾಲಯಗಳ ನಿರ್ಮಾಣದಲ್ಲಿ ಬಳಸಿಕೊಂಡಿರುವುದನ್ನು ನೋಡಬಹುದು. ವೇದ ಉಪನಿಷತ್ತುಗಳಲ್ಲಿ ಅಪಾರ ಜ್ಞಾನವಿದೆ. ಪ್ರಾಚೀನ ಕಾಲದಿಂದಲೂ ಜನರು ಅದನ್ನು ಬಾಯಿ ಮಾತಿನ ಮೂಲಕವೇ ಬೇರೆಯವರಿಗೆ ವರ್ಗಾಯಿಸಿಕೊಂಡು ಬಂದಿದ್ದಾರೆ. ಭಾರತೀಯ ಸಂಸ್ಕೃತಿ ವಿಶ್ವಕ್ಕೆ ಜ್ಞಾನವನ್ನು ನೀಡಿದ ಶ್ರೇಷ್ಠವಾದ ಸಂಸ್ಕೃತಿಯಾಗಿದೆ ಎಂದು ನುಡಿದರು.

ಗ್ರೂಪ್ ಫಾರ್ಮಸಿಟುಕಲ್ಸ್‌ನ ಉಪಾಧ್ಯಕ್ಷರಾದ ಡಾ. ಸುನೀಲ್ ಚಿಪ್ಲುಂಕರ್‌ರವರು ಮಾತನಾಡಿ, ಮಾನವೀಯ ಸಂಬಂಧಗಳಲ್ಲಿ ಸಾಮರಸ್ಯವಿರಬೇಕು. ಕುಟುಂಬ, ಸ್ನೇಹಿತರು, ಸಹೋದ್ಯೋಗಿಗಳು ಮತ್ತು ಸಮಾಜದ ಇತರ ವ್ಯಕ್ತಿಗಳೊಂದಗಿನ ಸಂಬಂಧಗಳು ಜೀವನದ ಗುಣಮಟ್ಟವನ್ನು ನಿರ್ಧರಿಸುತ್ತವೆ. ಈ ಸಂಬಂಧಗಳಲ್ಲಿ ಸೌಹಾರ್ದತೆ ಎಂದರೆ ಪರಸ್ಪರ ಗೌರವ, ಸಹಕಾರ ಹಾಗೂ ಸಂತೋಷಕರ ಜೀವನ ನಡೆಸುವುದು ಎಂದರ್ಥ ಎಂದು ತಿಳಿಸಿದರು.

ಕು. ಆರ್.ಎಸ್. ಹರೀಶ್ ಪ್ರಾರ್ಥಿಸಿದರು. ಡಾ. ಆನಂದ್‌ಕುಮಾರ್ ಟೆಂಗ್ಲಿ ಸ್ವಾಗತಿಸಿದರು. ಡಾ. ಕೆ. ಎಲ್. ಕೃಷ್ಣಾ ವಂದಿಸಿದರು. ಡಾ. ಹೆಚ್.ಎನ್. ವಿಶ್ವಾಸ್ ಕಾರ್ಯಕ್ರಮ ನಿರೂಪಿಸಿದರು.

## ರಾಷ್ಟ್ರದ ಪ್ರಗತಿ ಮತ್ತು ಸಮಗ್ರತೆಯಲ್ಲಿ ಯುವಕರ ಪಾತ್ರ ಮುಖ್ಯ

ರಾಷ್ಟ್ರದ ಪ್ರಗತಿ ಮತ್ತು ಸಮಗ್ರತೆಯಲ್ಲಿ ಯುವಕರ ಪಾತ್ರ ಮುಖ್ಯವೆಂದು ನಿವೃತ್ತ ಐ.ಎ.ಎಸ್ ಅಧಿಕಾರಿಗಳಾದ ಶ್ರೀ ಎ.ಕೆ. ಮೋನಪ್ಪರವರು ಹೇಳಿದರು.

ಸುತ್ತೂರು ಶ್ರೀ ಕ್ಷೇತ್ರದಲ್ಲಿ ನಡೆದ ಫಾರ್ಮಸಿ ಹಾಗೂ ಲೈಫ್ ಸೈನ್ಸ್ ವಿದ್ಯಾರ್ಥಿಗಳ ಶಿಬಿರದಲ್ಲಿ ದಿನಾಂಕ 13.4.2026ರಂದು ಅವರು ಉಪನ್ಯಾಸ ನೀಡಿದರು. ಮಕ್ಕಳಲ್ಲಿ ರಾಷ್ಟ್ರಭಕ್ತಿಯನ್ನು ಮೂಡಿಸುವುದು ಬಹಳ ಮುಖ್ಯ. ಯಾವುದೇ ರಾಜ್ಯದವರಾಗಿದ್ದರು ಮೊದಲು ಭಾರತೀಯ ಎಂಬ ಭಾವನೆ ಇರಬೇಕು. ಉತ್ತಮ ನಾಗರಿಕರಾಗಿ ರಾಷ್ಟ್ರ ನಿರ್ಮಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಯುವಜನರು ರಾಷ್ಟ್ರದ ಭವಿಷ್ಯವಾಗಿದ್ದು, ಅವರಲ್ಲಿ ಪ್ರಾಮಾಣಿಕತೆ, ಹೊಣೆಗಾರಿಕೆ, ನೈತಿಕತೆ, ಆಂತರಿಕ ಶಾಂತಿಯ ಜೊತೆಗೆ ಉತ್ತಮ ನಾಯಕತ್ವದ ಗುಣಗಳಿರಬೇಕು. ಜೀವನದಲ್ಲಿ ಸತ್ಯ ನಿಷ್ಠೆಯನ್ನು ಪಾಲಿಸಿದರೆ ಅದು ಸಮಾಜ ಮತ್ತು ರಾಷ್ಟ್ರದ ಮೇಲೆ ಒಳ್ಳೆಯ ಪರಿಣಾಮ ಬೀರುತ್ತದೆ. ಈ ದೃಷ್ಟಿಯಲ್ಲಿ ವಿದ್ಯಾರ್ಥಿಗಳು ಸಾಮಾಜಿಕ ಜವಾಬ್ದಾರಿಗಳನ್ನು ಅರಿತು ನಡೆಯಬೇಕು ಎಂದು ತಿಳಿಸಿದರು.



ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ಫಾರ್ಮಸಿ ಹಾಗೂ ಲೈಫ್ ಸೈನ್ಸ್ ವಿದ್ಯಾರ್ಥಿಗಳ ಶಿಬಿರದಲ್ಲಿ ಶ್ರೀ ಎ.ಕೆ. ಮೋನಪ್ಪ ಹಾಗೂ ಕು. ಟಿ.ಎ. ಮೇಘನಾರವರು ಉಪನ್ಯಾಸ ನೀಡಿದರು. (13 ಏಪ್ರಿಲ್ 2026)

ಮಂಗಳೂರಿನ ಸೆಂಟ್ ಅಲೋಯ್‌ಸಿಯಸ್ ಡೀಮ್ಡ್ ಯುನಿವರ್ಸಿಟಿಯ ಸಹಾಯಕ ಪ್ರಾಧ್ಯಾಪಕರಾದ ಕು. ಟಿ.ಎ ಮೇಘನಾರವರು, ಆಹಾರವು ಆರೋಗ್ಯಕರ ಜೀವನ ಶೈಲಿಯಲ್ಲಿ ಅತ್ಯಂತ ಪ್ರಮುಖವಾಗಿದೆ. ಸರಿಯಾದ ಪೌಷ್ಟಿಕ ಆಹಾರವು ದೀರ್ಘಕಾಲಿನ ಕಾಯಿಲೆಗಳನ್ನು ತಡೆಗಟ್ಟಲು ಮತ್ತು ಗುಣಪಡಿಸಲು ಸಹಾಯ ಮಾಡುತ್ತದೆ. ಸೇವಿಸುವ ಆಹಾರವು ರೋಗಗಳ ವಿರುದ್ಧ ಹೋರಾಡಿ ನಮ್ಮ ದೇಹವನ್ನು ಆರೋಗ್ಯವಾಗಿ ಇಡುತ್ತದೆ. ಸಂಸ್ಕರಿಸಿದ ಆಹಾರದ ಸೇವನೆಯಿಂದ ಅನೇಕ ದೈಹಿಕ ತೊಂದರೆಗಳು ಉಂಟಾಗುತ್ತವೆ. ಭಾರತೀಯ ಆಹಾರ ಪದಾರ್ಥಗಳಾದ ಅರಿಶಿನ, ತುಳಸಿ, ನುಗ್ಗೆಸೊಪ್ಪು, ಶುಂಠಿ, ಬೆಳ್ಳುಳ್ಳಿ ಮೊದಲಾದವುಗಳು ಹೆಚ್ಚು ರೋಗನಿರೋಧಕ ಶಕ್ತಿಯನ್ನು ಹೊಂದಿವೆ. ಸಮತೋಲನ ಆಹಾರವು ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳು ಮತ್ತು ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡಬಲ್ಲದು ಎಂದು ಹೇಳಿದರು.

ಹೆದರದಿರು ಮನವೆ, ಬೆದರದಿರು ತನುವೆ
ನಿಜವನರಿತು ನಿಶ್ಚಿಂತನಾಗಿರು
ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ
ಎಲವದಮರನ ಇಡುವರೊಬ್ಬರ ಕಾಣೆ
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ
ನಿಮ್ಮ ಶರಣರ ನುಡಿಯೆ ಎನಗೆ ಗತಿ, ಸೋಪಾನ
ಚೆನ್ನಮಲ್ಲಿಕಾರ್ಜುನಾ

**ಅಕ್ಕಮಹಾದೇವಿ**

### ವೈದ್ಯಕೀಯ–ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ದಂತವೈದ್ಯ–ಹೌಸ್ ಸರ್ಜನ್‌ಗಳ ಶಿಬಿರ

## ಶಿಬಿರಗಳು ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿಯನ್ನು ನೀಡುತ್ತವೆ




ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ವೈದ್ಯಕೀಯ–ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ದಂತವೈದ್ಯ–ಹೌಸ್ ಸರ್ಜನ್‌ಗಳ ಶಿಬಿರವನ್ನು ಡಾ. ಸಿ.ಡಿ. ಶ್ರೀನಿವಾಸಮೂರ್ತಿಯವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಡಾ. ಬಿ. ಸುರೇಶ್, ಡಾ. ಪಿ.ಕೆ.ಎಂ. ಪ್ರಶಾಂತ್, ಸಂಚಾಲಕರು ಹಾಗೂ ಶಿಬಿರಾರ್ಥಿಗಳಿದ್ದಾರೆ. (16 ಏಪ್ರಿಲ್ 2026)

ಶಿಬಿರಗಳು ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿಯನ್ನು ನೀಡುತ್ತವೆ ಎಂದು ಮೈಸೂರಿನ ಹಿರಿಯ ವೈದ್ಯರಾದ ಡಾ. ಸಿ.ಡಿ. ಶ್ರೀನಿವಾಸಮೂರ್ತಿಯವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ವೈದ್ಯಕೀಯ–ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ದಂತವೈದ್ಯ–ಹೌಸ್ ಸರ್ಜನ್‌ರ ಶಿಬಿರವನ್ನು ದಿನಾಂಕ 16.4.2026 ರಂದು ಉದ್ಘಾಟಿಸಿ ಅವರು ಮಾತನಾಡುತ್ತಾ ತಿಳಿಸಿದರು. ವೈದ್ಯರು ರೋಗಿಗಳೊಂದಿಗೆ ಭಾವನಾತ್ಮಕವಾಗಿ ಸ್ಪಂದಿಸಬೇಕು. ಚಿಕಿತ್ಸಾ ವಿಧಾನಗಳಲ್ಲಿ ಅನೇಕ ಬದಲಾವಣೆಗಳಾಗುತ್ತಿವೆ. ಮೊಬೈಲ್ ಅಪ್‌ಡೇಟ್‌ನಂತೆ ನಾವು ನಿರಂತರವಾಗಿ ಅಪ್‌ಡೇಟ್ ಮಾಡಿಕೊಳ್ಳುತ್ತಾ ವೃತ್ತಿಯಲ್ಲಿ ನಿಪುಣತೆ ಹೊಂದಬೇಕು. ಪ್ರತಿ ಧರ್ಮದ ಮೂಲಮಂತ್ರ ದಯೆ, ಕರುಣೆಗಳಾಗಿದ್ದು ಅದನ್ನು ಅಳವಡಿಸಿಕೊಳ್ಳಬೇಕು. ಶ್ರೀಕ್ಷೇತ್ರದ ರಮ್ಯ ಪರಿಸರದಲ್ಲಿ ಸಾತ್ವಿಕ ಆಹಾರ, ಉತ್ತಮ ಸಂವಾದ, ವಿಚಾರಗಳ ಆಲಿಸುವಿಕೆಯಿಂದ ದೈಹಿಕ ಹಾಗೂ ಮಾನಸಿಕ ವಿಶ್ರಾಂತಿ ದೊರೆತು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಬೆಂಗಳೂರಿನ ಕೆಎಸ್‌ಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಪಿ.ಕೆ.ಎಂ. ಪ್ರಶಾಂತ್‌ರವರು ಮಾತನಾಡಿ, ವೈದ್ಯೋ ನಾರಾಯಣೋ ಹರಿ ಎಂಬಂತೆ ವೈದ್ಯರು ಮಾನವೀಯತೆ, ಹೃದಯವಂತಿಕೆಯಿಂದ ಜನರ ಬದುಕಿಗೆ ಬೆಳಕಾಗಬೇಕು. ಪ್ರತಿ ರೋಗಿಯಲ್ಲಿಯೂ ಭಗವಂತನಿದ್ದಾನೆಂದು ಭಾವಿಸಿ ಚಿಕಿತ್ಸೆ ನೀಡಬೇಕು. ಸ್ವಾತಂತ್ರ್ಯ ಪೂರ್ವಕ್ಕೆ ಹೋಲಿಸಿದರೆ ದೇಶದಲ್ಲಿ ಸಾಂಕ್ರಾಮಿಕ ರೋಗಗಳ ಹರಡುವಿಕೆ ಕಡಿಮೆಯಾಗಿದ್ದು, ಇದರಲ್ಲಿ ವೈದ್ಯಕೀಯ ಕ್ಷೇತ್ರದ ಕೊಡುಗೆ ಮುಖ್ಯವಾಗಿದೆ ಎಂದು ನುಡಿದರು.

ಜೆಎಸ್‌ಎಸ್ ಎಎಚ್‌ಇಆರ್‌ನ ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್‌ರವರು ಮಾತನಾಡಿ, ಭವಿಷ್ಯದ ಪ್ರಪಂಚವನ್ನು ದೃಷ್ಟಿಯಲ್ಲಿಟ್ಟುಕೊಂಡು ವೈದ್ಯರುಗಳು ಹೊಸ ಕೌಶಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಪಡೆದ ಜ್ಞಾನವನ್ನು ಆತ್ಮವಿಶ್ವಾಸದಿಂದ ಬಳಸಬೇಕು. ಜನರಿಗೆ ಚಿಕಿತ್ಸೆಯನ್ನು ನೀಡುವಾಗ ಹೆಚ್ಚು ಜಾಗ್ರತೆಯನ್ನು ವಹಿಸಬೇಕು. ಕೃತಕ ಬುದ್ಧಿಮತ್ತೆಯು ಎಷ್ಟೇ ಪ್ರಬಲವಾಗಿದ್ದರೂ, ವೈದ್ಯಕೀಯ ವೃತ್ತಿಗೆ ಪರ್ಯಾಯವಾಗಲಾರದು. ತಂತ್ರಜ್ಞಾನಕ್ಕಿಂತ ಪ್ರಬುದ್ಧರಾಗಿ ನಾವು ಬೆಳೆಯಬೇಕು. ಆ ದೃಷ್ಟಿಯಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯಲ್ಲಿ ಸಂಶೋಧನೆಗೆ ಅನೇಕ ಅವಕಾಶಗಳನ್ನು ಮಾಡಿಕೊಟ್ಟಿದೆ ಎಂದು ಹೇಳಿದರು.

ಶ್ರೀಮತಿ ಶ್ರೀವಿದ್ಯಾ ನಾಗರಾಜುರವರು ಮಾತನಾಡಿ, ಕರ್ಮವು ಕೇವಲ ಧಾರ್ಮಿಕ ಅಥವಾ ಆಧ್ಯಾತ್ಮಿಕ ಪರಿಕಲ್ಪನೆಯಷ್ಟೇ ಅಲ್ಲ, ಇದು ಮಾನವ ಜೀವನದ ನೈತಿಕ ಹಾಗೂ ತತ್ವ ಚಿಂತನೆಯ ಮೂಲವಾಗಿದೆ. ಕಾಯಕ ಮಾಡದೇ ಯಾರೂ ಬದುಕಲು ಸಾಧ್ಯವಿಲ್ಲ. ಮಾಡುವ ಪ್ರತಿಯೊಂದು ಕಾಯಕ ಮತ್ತು ಕ್ರಿಯೆ ಫಲವನ್ನು ಹೊಂದಿರುತ್ತದೆ. ಪಾಪ ಪುಣ್ಯಗಳ ನಡುವೆ ಬದುಕು ನಿರ್ಮಿತವಾಗಿರುತ್ತದೆ ಎಂದು ಹೇಳಿದರು.

ಪ್ರೇಕ್ಷಾ ಪತ್ರಿಕೆಯ ಸಂಪಾದಕರಾದ ಶ್ರೀ ಶಶಿ ಕಿರಣ್‌ರವರು ಭಾರತೀಯ ಸಂಸ್ಕೃತಿಯು ಪುರಾತನವಾಗಿದೆ. ತನ್ನದೇ ಆದ ವಿಶೇಷ ತತ್ವ–ಆಚರಣೆಗಳನ್ನು ಒಳಗೊಂಡಿದೆ. ಪ್ರತಿಯೊಂದು ಆಚರಣೆಯೂ ಅರ್ಥಪೂರ್ಣವಾಗಿವೆ. ಈ ಶ್ರೇಷ್ಠ ಸಂಸ್ಕೃತಿಯಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ತತ್ವಜ್ಞಾನ ಸಮ್ಮಿಲಿತಗೊಂಡಿವೆ ಎಂದು ಹೇಳಿದರು.

ಡಾ. ಬಿ. ನಾಗಶ್ರೀ ಪ್ರಾರ್ಥಿಸಿದರು. ಡಾ. ಪಿ. ಅಶೋಕ ಸ್ವಾಗತಿಸಿದರು. ಶ್ರೀ ಡಾ. ಪಿ.ಕೆ. ಅಂಬಿಕಾತನಯ ವಂದಿಸಿದರು. ಡಾ. ಪುರುಷೋತ್ತಮ ಶಾಸ್ತ್ರಿ ಕಾರ್ಯಕ್ರಮ ನಿರೂಪಿಸಿದರು.

## ಮನಸ್ಸು–ದೇಹದ ಸಮತೋಲನಕ್ಕೆ ಉತ್ತಮ ಹವ್ಯಾಸಗಳು ಆವಶ್ಯಕ

ಮನಸ್ಸು–ದೇಹದ ಸಮತೋಲನಕ್ಕೆ ಉತ್ತಮ ಹವ್ಯಾಸಗಳು ಅವಶ್ಯಕ ಎಂದು ಯೋಗ ಹಾಗೂ ಧ್ಯಾನ ಸಲಹೆಗಾರರಾದ ಶ್ರೀ ಶರತ್ ಕೃಷ್ಣನ್‌ರವರು ಹೇಳಿದರು. ಶ್ರೀ ಸುತ್ತೂರು ಕ್ಷೇತ್ರದಲ್ಲಿ ನಡೆದ ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ದಂತವೈದ್ಯ ಹೌಸ್ ಸರ್ಜನ್‌ಗಳ ಶಿಬಿರದಲ್ಲಿ ದಿನಾಂಕ 17.4.2026 ರಂದು ಅವರು ಉಪನ್ಯಾಸ ನೀಡಿದರು. ಮಾನವನು ಸಂಘ ಹಾಗೂ ಸಂಕೀರ್ಣ ಜೀವಿ. ಸಾಮಾಜಿಕ ಜೀವನವು ಸಂಕೀರ್ಣವಾದುದು. ಕುಟುಂಬದ ಸದಸ್ಯ ಹಾಗೂ ಸಹದ್ಯೋಗಿಗಳೊಂದಿಗೆ ಹೊಂದಿಕೊಳ್ಳುವಾಗ ಒತ್ತಡಕ್ಕೆ ಒಳಗಾಗುತ್ತಾನೆ. ಇದು ಆರೋಗ್ಯ ಮತ್ತು ಜೀವನ ನಿರ್ವಹಣೆ ಮೇಲೆ ಪ್ರತಿಕೂಲ ಪ್ರಭಾವ ಬೀರುತ್ತದೆ. ಇದರಿಂದ ಮುಂಗೋಪ ಮತ್ತು ಹೆಚ್ಚು ಕಿರಿಕಿರಿಯನ್ನು ಅನುಭವಿಸಬಹುದು. ಮನಸ್ಸನ್ನು ಶಾಂತಿಯುತವಾಗಿ ಇಟ್ಟುಕೊಳ್ಳುವುದರಿಂದ ಒತ್ತಡದ ಬದುಕಿನಿಂದ ಹೊರಬರಬಹುದು. ಇದಕ್ಕಾಗಿ ಯೋಗಾಭ್ಯಾಸ, ವ್ಯಾಯಾಮ, ಸಂಗೀತ, ಅಗತ್ಯ ನಿದ್ರೆ, ಸಮತೋಲಿನ ಆಹಾರ ಹಾಗೂ ಸ್ವಾಧ್ಯಾಯಗಳು ಮಾರ್ಗಗಳಾಗಿವೆ ಎಂದು ತಿಳಿಸಿದರು.

ಯೋಗ ಸಾಧಕರು ಹಾಗೂ ಸಲಹೆಗಾರರಾದ ಡಾ. ಶ್ರೀಧರ್ ದೇಶ್‌ಮುಖ್‌ರವರು, ಹೃದಯ ಹಾಗೂ ಮನಸ್ಸಿನಲ್ಲಿ ವಿಶಾಲ ಮನೋಭಾವವಿರಬೇಕು. ಮನಸ್ಥಿತಿ ಹಾಗೂ ಪರಿಸ್ಥಿತಿಗಳನ್ನು ಅರಿತು ನಡೆಯುವ ಗುಣವನ್ನು ಬೆಳೆಸಿಕೊಳ್ಳಬೇಕು. ಧರ್ಮ, ಅರ್ಥ, ಕಾಮ ಹಾಗೂ



ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ವೈದ್ಯಕೀಯ–ಸ್ನಾತಕೋತ್ತರ ವಿದ್ಯಾರ್ಥಿಗಳ ಹಾಗೂ ದಂತವೈದ್ಯ ಹೌಸ್ ಸರ್ಜನ್‌ಗಳ ಶಿಬಿರದಲ್ಲಿ ಶ್ರೀ ಶರತ್ ಕೃಷ್ಣನ್ ಹಾಗೂ ಡಾ. ಶಶಿಧರ್ ದೇಶಮುಖ್‌ರವರುಗಳು ಉಪನ್ಯಾಸ ನೀಡಿದರು. (17 ಏಪ್ರಿಲ್ 2026)

ಮೋಕ್ಷದ ಅರ್ಥವನ್ನು ಸ್ಪಷ್ಟವಾಗಿ ಗ್ರಹಿಸಬೇಕು. ಮನೋನಿಗ್ರಹದೊಂದಿಗೆ ಕಾಮ–ಕ್ರೋಧಾದಿಗಳನ್ನು ಜಯಿಸಬೇಕು. ಗುರುವಿನ ಆಶೀರ್ವಾದದಿಂದ ಜೀವನದ ಸತ್ಯವನ್ನು ಅರಿತು ಮೋಕ್ಷ ಮಾರ್ಗದಲ್ಲಿ ನಡೆಯಬೇಕು ಎಂದು ಹೇಳಿದರು.

ಅಮಾವಾಸ್ಯೆ ಪ್ರಯುಕ್ತ ಕ್ಷೇತ್ರದಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನೆರವೇರಿದವು. ಈ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದರ್ಶನ ಮತ್ತು ಆಶೀರ್ವಾದವನ್ನು ಶಿಬಿರಾರ್ಥಿಗಳು ಪಡೆದರು. ದಂತವೈದ್ಯ ಹೌಸ್‌ಸರ್ಜನ್ ಡಾ. ವಿನಯರವರು ಪರಮಪೂಜ್ಯರ ಸಾನ್ನಿಧ್ಯದಲ್ಲಿ ಭಕ್ತಿ ಗೀತೆಯನ್ನು ಹಾಡಿದರು.

ಸಂಜೆ ಕಪಿಲಾ ನದಿ ತೀರದಲ್ಲಿ ಪ್ರಾರ್ಥನೆ ಹಾಗೂ ಕಪಿಲಾರತಿ ಕಾರ್ಯಕ್ರಮವು ನೆರವೇರಿತು. ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು. □

## ಗ್ರಾಮೀಣ ಆರೋಗ್ಯ ಕೇಂದ್ರಗಳ ಸುಧಾರಣೆ ಅವಶ್ಯಕ

ಗ್ರಾಮೀಣ ಆರೋಗ್ಯ ಕೇಂದ್ರಗಳ ಸುಧಾರಣೆ ಅವಶ್ಯಕವಾಗಿದೆ ಎಂದು ಮೈಸೂರಿನ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯ ಅಧ್ಯಕ್ಷರಾದ ಡಾ. ಕೆ.ಬಿ. ಲಿಂಗರಾಜುರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 18.4.2026 ರಂದು ನಡೆದ ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ದಂತವೈದ್ಯ ಹೌಸ್ ಸರ್ಜನ್‌ಗಳ ಶಿಬಿರದ ಸಮಾರೋಪ ಭಾಷಣ ಮಾಡುತ್ತಾ ಅವರು ತಿಳಿಸಿದರು. ಆರೋಗ್ಯ ಸೇವೆಗಳು ಸಾಮಾನ್ಯ ಜನರಿಗೆ ಕೈಗೆಟಕುವ ದರದಲ್ಲಿ ದೊರಕುವಂತಾಗಬೇಕು. ವೈದ್ಯರಲ್ಲಿ ಸೇವಾ ಮನೋಭಾವನೆ, ನೈತಿಕತೆ ಹಾಗೂ ಮಾನವೀಯತೆಗಳಿರಬೇಕು. ಆತ್ಮೀಯತೆಯಿಂದ ರೋಗಿಗಳಿಗೆ ಸಾಂತ್ವನ ಹೇಳಿದರೆ ಸಾಕು ಕಾಯಿಲೆ ಅರ್ಧ ಗುಣವಾಗುತ್ತದೆ. ಯುವ ವೈದ್ಯರುಗಳ ಸೇವೆ ನಗರಕ್ಕೆ ಮಾತ್ರ ಸೀಮಿತವಾಗದೆ, ಗ್ರಾಮೀಣ

ಭಾಗಗಳಿಗೂ ವಿಸ್ತರಿಸಬೇಕು. ಶ್ರೀ ಸುತ್ತೂರು ಮಠದ ವೈದ್ಯಕೀಯ ಸಂಸ್ಥೆಗಳು ಗ್ರಾಮೀಣ ಜನರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಿವೆ ಎಂದು ಹೇಳಿದರು.

ಜೆಎಸ್‌ಎಸ್ ಎಎಚ್‌ಇಆರ್‌ನ ಕುಲಪತಿಗಳಾದ ಡಾ. ಹೆಚ್. ಬಸವನಗೌಡಪ್ಪನವರು, ವೈದ್ಯರು ರೋಗಿಯ ಮನಸ್ಥಿತಿಯನ್ನು ಅರಿತು ಚಿಕಿತ್ಸೆ ನೀಡಬೇಕು. ವೈದ್ಯರುಗಳು ಕಾಲದ ಮಿತಿಯಿಲ್ಲದೆ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕಾಗುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬಹುಮುಖ್ಯವಾಗುತ್ತದೆ. ವೈದ್ಯಕೀಯ ಕ್ಷೇತ್ರವು ಗುಂಪು ಸೇವೆಯಾಗಿರುವುದರಿಂದ ಎಲ್ಲರೊಂದಿಗೂ ಉತ್ತಮ ಸಂಬಂಧ ಹೊಂದಿ ಸಹಕಾರಯುತವಾಗಿ ಸೇವೆ ಸಲ್ಲಿಸಬೇಕೆಂದು ತಿಳಿಸಿದರು.

ವಕೀಲರಾದ ಶ್ರೀಮತಿ ಕ್ಷಮಾ ನರಗುಂದರವರು ಹೊಂದಾಣಿಕೆ ಮಾಡಿಕೊಂಡು ಬದುಕಿದಾಗ ಸಮಾಜದಲ್ಲಿ ಐಕ್ಯತೆ ಮತ್ತು ಸಹಕಾರ ಬೆಳೆಯುತ್ತದೆ. ಬೇರೆಯವರ ಕಷ್ಟಗಳಿಗೆ ಮರುಗಬೇಕು. ಸಹಾಯ ಹಸ್ತ ನೀಡಬೇಕು. ವಿಭಿನ್ನ ಭಾಷೆ, ಸಂಸ್ಕೃತಿಗಳು ಮತ್ತು ಅಭಿಪ್ರಾಯಗಳನ್ನು ಗೌರವಿಸಿ ಎಲ್ಲರೊಂದಿಗೆ ಬೆರೆತು ಬದುಕುವುದು, ಸಾರ್ವತ್ರಿಕ ಹೊಂದಾಣಿಕೆಯಾಗಿದೆ ಎಂದು ತಿಳಿಸಿದರು.

ವಕೀಲರಾದ ಶ್ರೀ ವಿಕ್ರಮ್ ಪಡ್ಕೆಯವರು ಮಾನವನ ಆಸೆಗಳಿಗೆ ಮಿತಿ ಇಲ್ಲ, ಬದುಕಿನುದ್ದಕ್ಕೂ ಅವುಗಳನ್ನು ಪೂರೈಸಿಕೊಳ್ಳುವುದರಲ್ಲಿಯೆ ನಿರಂತರನಾಗಿ ನೈಜ ಸಂತೋಷವನ್ನು ಕಳೆದುಕೊಳ್ಳುತ್ತಿದ್ದಾನೆ. ಒತ್ತಡ ಹಾಗೂ ನೋವುಗಳನ್ನು ಸಹಜವಾಗಿ ಸ್ವೀಕರಿಸುವ ಗುಣಗಳನ್ನು ಬೆಳೆಸಿಕೊಂಡು, ಸಹಿಷ್ಣುತೆ ಹಾಗೂ ಸಹಾನುಭೂತಿಯಿಂದ ಬದುಕಬೇಕು ಎಂದು ತಿಳಿಸಿದರು.

ಡಾ. ಟಿ.ಎಸ್. ರೇಖಾ, ಡಾ. ಅನನ್ಯ ಎನ್. ಕೃಷ್ಣಸ್ವಾಮಿ, ಡಾ. ಪರಶುರಾಮ್ ಪೈ, ಡಾ. ಆರ್. ಶಮಿತ, ಡಾ. ತನಯ್ ಮಿಶ್ರರವರುಗಳು ಅನಿಸಿಕೆಯನ್ನು ಹಂಚಿಕೊಂಡರು.

ಡಾ. ಕೆ.ಬಿ. ಸುಮರವರು ಶಿಬಿರದ ವರದಿ ಮಂಡಿಸಿದರು. ಡಾ. ಜೆ. ನೇಹಲ ಪ್ರಾರ್ಥಿಸಿದರು. ಡಾ. ಕೆ.ಬಿ. ಚೇತಕ್ ಸ್ವಾಗತಿಸಿದರು. ಡಾ. ಸುನೀತ್ ಶೆಟ್ಟಿ ವಂದಿಸಿದರು ಡಾ. ನಾಗಶ್ರೀ ವಿ. ಅಕ್ಷಯ್ ನಿರೂಪಿಸಿದರು.

### ವಿದ್ಯಾರ್ಥಿಗಳ ಶಿಬಿರ

## ವಿದ್ಯಾರ್ಥಿಗಳಲ್ಲಿ ಸಾಧಿಸುವ ಛಲವಿರಬೇಕು

ವಿದ್ಯಾರ್ಥಿಗಳಲ್ಲಿ ಸಾಧಿಸುವ ಛಲವಿರಬೇಕು ಎಂದು ಕನ್ನಡಪ್ರಭ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ರವಿ ಹೆಗಡೆಯವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ವಿದ್ಯಾರ್ಥಿಗಳ ಶಿಬಿರವನ್ನು ದಿನಾಂಕ 22.4.2026ರಂದು ಉದ್ಘಾಟಿಸಿ ಅವರು ಮಾತನಾಡಿದರು. ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿಯಲು ಉತ್ತಮ ಅವಕಾಶಗಳಿವೆ. ಸೌಲಭ್ಯಗಳ ಸದುಪಯೋಗ ಪಡೆದುಕೊಂಡು ತಂತ್ರಜ್ಞಾನದ ಸಮರ್ಪಕ ಬಳಕೆಯಿಂದ ಹೆಚ್ಚು ಜ್ಞಾನ ಸಂಪಾದಿಸಬಹುದು. ಆದರೆ ಅತಿಯಾದ ಅವಲಂಬನೆಯಿಂದಾಗಿ ವಿಚಾರಗಳನ್ನು ಮನನ ಮಾಡುವ, ಕೌಶಲಗಳನ್ನು ಬಳಸುವ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಸ್ಪಷ್ಟ ಓದು, ಬರಹ, ಗಣಿತದ ಮೂಲ ಕೌಶಲಗಳ ಬಳಕೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸದಿರುವುದು ಸಮಸ್ಯೆಯಾಗಿದೆ. ಶಿಬಿರವು ವಿದ್ಯಾರ್ಥಿಗಳು ಮುಂದಿನ ಜೀವನಕ್ಕೆ ಸಿದ್ಧಗೊಳ್ಳಲು ಸಹಾಯಕವಾಗುವ ಮಾರ್ಗದರ್ಶನವನ್ನು ನೀಡುತ್ತದೆ



ಸುತ್ತೂರು ಶ್ರೀಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಶಿಬಿರವನ್ನು ಶ್ರೀ ರವಿ ಹೆಗಡೆಯವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಶ್ರೀಮತಿ ಕೆ. ರಾಜಲಕ್ಷ್ಮಿ, ಡಾ. ಅಶೋಕ್ ಸಂಗಪ್ಪ ಆಲೂರ, ಶ್ರೀ ಡಿ.ಆರ್. ಅಮಿತ್, ಸಂಚಾಲಕರು ಹಾಗೂ ಶಿಬಿರಾರ್ಥಿಗಳಿದ್ದಾರೆ. (22 ಏಪ್ರಿಲ್ 2026)

ಎಂದು ತಿಳಿಸಿದರು.

ಮೈಸೂರು ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರಾದ ಶ್ರೀಮತಿ ಕೆ. ರಾಜಲಕ್ಷ್ಮಿಯವರು ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ವೃತ್ತಿಗಳ ಹೊರತಾಗಿಯು ಬೇರೆ ಕ್ಷೇತ್ರಗಳಲ್ಲಿಯೂ ವಿದ್ಯಾರ್ಥಿಗಳಿಗೆ ಸಾಧನೆ ಮಾಡಲು ಅನೇಕ ಅವಕಾಶಗಳಿವೆ. ಸ್ಪಷ್ಟ ಉದ್ದೇಶ ಗುರಿಗಳೊಂದಿಗೆ ನಿರಂತರ ಪರಿಶ್ರಮದಿಂದ ಸಾಧನೆಯ ಮಾರ್ಗವನ್ನು ಕಂಡುಕೊಳ್ಳಬಹುದು. ಮೊಬೈಲ್‌ಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸಿ ಹೆಚ್ಚು ಪುಸ್ತಕಗಳನ್ನು ಓದುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು.

ಕೊಡಗು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಅಶೋಕ್ ಸಂಗಪ್ಪ ಆಲೂರರವರು ಕಲಿಯುವುದು ಕೇವಲ ಪರೀಕ್ಷೆಗಳಲ್ಲಿ ಉತ್ತೀರ್ಣವಾಗುವುದಕ್ಕೆ ಸೀಮಿತವಾಗಬಾರದು. ವಿದ್ಯಾರ್ಥಿಗಳಲ್ಲಿ ಅನ್ವೇಷಣೆ ಹಾಗೂ ಸಂಶೋಧನಾತ್ಮಕ ಪ್ರವೃತಿ ಹಾಗೂ ಕುತೂಹಲಗಳನ್ನು ಮೂಡಿಸುವಂತಿರಬೇಕು. ಪ್ರಪಂಚವು ಇಂದು ಸಂಕೀರ್ಣತೆಯಿಂದ ಕೂಡಿದೆ. ಸವಾಲುಗಳು ಹಾಗೂ ಇತಿಮಿತಿಗಳ ಮಧ್ಯೆ ಜೀವನವನ್ನು ರೂಪಿಸಿಕೊಳ್ಳುವುದನ್ನು ತಿಳಿಯಬೇಕು. ದೇಶದ ಮುಂದಿನ ನಾಗರಿಕರಾದ ವಿದ್ಯಾರ್ಥಿಗಳು ಸನ್ನಡತೆಯೊಂದಿಗೆ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ವಿದ್ಯೆ, ವಿನಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ವಿದ್ವಾನ್ ಶ್ರೀ ಗಣಪತಿ ಭಟ್‌ರವರು ಭಾರತೀಯ ಸಂಸ್ಕೃತಿ ಅನಂತವಾದದ್ದು. ಎಷ್ಟೇ ಹೊರಗಿನ ಆಕ್ರಮಣಗಳು ನಡೆದರೂ ನಾಶವಾಗದೇ ಸ್ಥಿರವಾಗಿದ್ದು, ಚಲನಶೀಲವಾಗಿರುವುದೇ ಅದರ ಶ್ರೇಷ್ಠತೆ. ಸಂಸ್ಕೃತಿ ಉಳಿಯಲು ಭಾರತೀಯ ಗುರುಕುಲ ಶಿಕ್ಷಣ ಪದ್ಧತಿಯು ಅತಿ ಮುಖ್ಯವಾಗಿದೆ. ವೇದ, ಶಾಸ್ತ್ರ, ಪುರಾಣ, ಕಾವ್ಯ ಹಾಗೂ ಇತಿಹಾಸಗಳು ಇದಕ್ಕೆ ಭದ್ರಬುನಾದಿಗಳಾಗಿವೆ. ನಡೆ ನುಡಿಗಳ ಸುಧಾರಣೆಯಲ್ಲಿ ಸಂಸ್ಕೃತಿಯ ಚೌಕಟ್ಟು ಬಹಳ ಮುಖ್ಯ ಎಂದು ನುಡಿದರು.

ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಸಹಾಯಕ ಆಡಳಿತಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು

ಜೀವನದಲ್ಲಿ ಕನಸುಗಳನ್ನು ಕಾಣಬೇಕು. ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಶಕ್ತಿ ಸಾಮರ್ಥ್ಯಗಳನ್ನು ಸರಿಯಾಗಿ ಬಳಸಿ ಸಾಧಿಸಬೇಕು. ಕ್ಷಣಿಕ ಆಸೆಗಳಿಗಾಗಿ ಕನಸುಗಳನ್ನು ಮಾರಿಕೊಳ್ಳದೆ ದೃಢ ಸಂಕಲ್ಪ, ಸತತ ಪರಿಶ್ರಮದಿಂದ ನನಸು ಮಾಡಿಕೊಳ್ಳಬೇಕು ಎಂದರು.

ಕು. ಬಿ. ಅಮೃತಾ ಪ್ರಾರ್ಥಿಸಿದರು. ಶ್ರೀ ಸಿ. ಗಿರೀಶ್ ಸ್ವಾಗತಿಸಿದರು. ಶ್ರೀ ಎಂ. ಆರ್. ರವಿ ವಂದಿಸಿದರು. ಶ್ರೀಮತಿ. ಕೆ. ಎಂ. ಬಿಂದು ಕಾರ್ಯಕ್ರಮ ನಿರೂಪಿಸಿದರು.

**ಯುವಜನರ ಶಿಬಿರ**

## ಶಿಸ್ತು–ಸ್ಥಿರತೆಯೇ ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿನ ಕೀಲಿಕೈ




ಸುತ್ತೂರು ಶ್ರೀಕ್ಷೇತ್ರದಲ್ಲಿ ಯುವಜನರ ಶಿಬಿರವನ್ನು ಡಾ. ಬಿ. ಗೋಪಾಲಕೃಷ್ಣರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಪ್ರೊ. ಟಿ.ಸಿ. ತಾರಾನಾಥ್, ಶ್ರೀ ಎನ್.ಎಸ್. ಮಧುಕುಮಾರ್, ಸಂಚಾಲಕರು ಹಾಗೂ ಶಿಬಿರಾರ್ಥಿಗಳಿದ್ದಾರೆ. (25 ಏಪ್ರಿಲ್ 2026)

ಶಿಸ್ತು ಮತ್ತು ಸ್ಥಿರತೆಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಹಿಂದಿನ ಯಶಸ್ಸಿನ ಗುಟ್ಟು ಎಂದು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳಾದ ಶ್ರೀ ಡಾ. ಬಿ. ಗೋಪಾಲಕೃಷ್ಣರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದ ಯುವಜನರ ಶಿಬಿರವನ್ನು ದಿನಾಂಕ 25.4.2026 ರಂದು ಉದ್ಘಾಟಿಸಿ ಅವರು ಮಾತನಾಡಿದರು. ಇದು ಸ್ಪರ್ಧಾತ್ಮಕ ಯುಗ. ಜೀವನದಲ್ಲಿ ಪ್ರತಿ ದಿನವೂ ಪರಿಶ್ರಮದೊಂದಿಗೆ ಗುರಿ ಸಾಧನೆಯ ಕಡೆಗೆ ಸಾಗಬೇಕು. ಗುರಿಯ ಸ್ಪಷ್ಟತೆಯೊಂದಿಗೆ ಮುಂದಿನ ಜೀವನದ ಬಗ್ಗೆಯೂ ಚಿಂತನೆ ಇರಬೇಕು. ಸೋಲುಗಳಿಗೆ ಹೆದರದೆ ಅವುಗಳನ್ನು ಸಾಧನೆಗೆ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಮುಂದುವರೆಯುವುದು ಮುಖ್ಯ ಎಂದು ತಿಳಿಸಿದರು.

ವಕೀಲರಾದ ಶ್ರೀ ಎನ್.ಎಸ್. ಮಧುಕುಮಾರ್‌ರವರು, ಉತ್ತಮ ವಿಚಾರಗಳನ್ನು ಅಳವಡಿಸಿಕೊಂಡು ಜೀವನದಲ್ಲಿ ಅನುಸರಿಸಿದರೆ ಯಶಸ್ಸು ಖಚಿತ. ಪರಿಶ್ರಮವೇ ಯಶಸ್ಸಿನ ಮೂಲ ಮಂತ್ರ. ಜನನ ಮತ್ತು ಮರಣಗಳ ನಡುವಿನ ಬದುಕನ್ನು ಸಾರ್ಥಕವಾಗಿ ರೂಪಿಸಿಕೊಳ್ಳುವುದು ನಮ್ಮ

ಕೈಯಲ್ಲಿದೆ ಎಂದು ಹೇಳಿದರು.

ಹಾಸನ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಟಿ.ಸಿ. ತಾರಾನಾಥ್‌ರವರು, ಶ್ರೀ ಸುತ್ತೂರು ಕ್ಷೇತ್ರವು ಸಕಾರಾತ್ಮಕ ಶಕ್ತಿಯಿಂದ ಕೂಡಿದೆ. ಶಿಬಿರದಲ್ಲಿ ಭಾಗವಹಿಸುತ್ತಿರುವವರೆಲ್ಲರು ಪುಣ್ಯವಂತರು. ಜೀವನದಲ್ಲಿ ಸಂಸ್ಕಾರದ ಅಗತ್ಯವಿದೆ. ಹಿಂದೆ ಗುರು ಮುಂದೆ ಗುರಿ ಇಟ್ಟುಕೊಂಡು ಒಳ್ಳೆಯ ಪ್ರಜೆಯಾಗಬೇಕು. ಜ್ಞಾನವು ಸುಲಭವಾಗಿ ದಕ್ಕುವುದಲ್ಲ, ಅದಕ್ಕೆ ತಪಸ್ಸು ಅಗತ್ಯ. ನಮ್ಮ ಅಭ್ಯುದಯಕ್ಕೆ ಮನಸ್ಸೇ ಕಾರಣ ಎಂದು ತಿಳಿಸಿದರು.

ಏಮ್‌ಹೈನ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಎನ್. ರವಿಶಂಕರ್‌ರವರು, ಯಾವುದೇ ಒಂದು ಉದ್ಯಮ ಪ್ರಾರಂಭಿಸಲು ಆರ್ಥಿಕ ಹಾಗೂ ಮಾನವ ಸಂಪನ್ಮೂಲಗಳ ಅವಶ್ಯಕತೆಯಿದೆ. ಉದ್ಯಮದ ಮೇಲೆ ಹಣ ಹೂಡಲು ಸರ್ಕಾರ ಹಾಗೂ ಇತರ ಸಂಸ್ಥೆಗಳು ಪ್ರಸ್ತುತ ದಿನಗಳಲ್ಲಿ ಸಿದ್ಧವಿವೆ. ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಬದ್ಧತೆ ಇರಬೇಕು. ಇಂದಿನ ದಿನಗಳಲ್ಲಿ ಉದ್ಯಮಶೀಲರಾಗುವುದು ಆಯ್ಕೆಯಲ್ಲ, ಅನಿವಾರ್ಯವಾಗಿದೆ ಎಂದರು.

ಜೆ.ಕೆ. ಗ್ಲೋಬಲ್ ಅಕಾಡೆಮಿಯ ನಿರ್ದೇಶಕರಾದ ಶ್ರೀ ಎಂ.ಕೆ. ಪ್ರಭುದೇವರವರು ಅಸಾಧ್ಯ ಎನ್ನುವುದು ಬದುಕಿನಲ್ಲಿ ಯಾವುದೂ ಇಲ್ಲ. ಸಾಧಿಸುವ ಛಲವಿರಬೇಕು. ದೇಹ ಹಾಗೂ ಮನಸ್ಸಿಗೆ ಹಾನಿಯುಂಟು ಮಾಡುವ ಅಭ್ಯಾಸಗಳಿಂದ ದೂರವಿರಬೇಕು. ಆರೋಗ್ಯಕರ ಜೀವನ ರೂಪಿಸಿಕೊಳ್ಳಬೇಕು. ಕುಟುಂಬ ಹಾಗೂ ಸಮಾಜದ ಜೊತೆ ಉತ್ತಮ ಹೊಂದಾಣಿಕೆ ಮಾಡಿಕೊಂಡು ಬದುಕಬೇಕು ಎಂದು ಹೇಳಿದರು.

ಕು. ಮಧುರ ಮತ್ತು ತಂಡ ಪ್ರಾರ್ಥಿಸಿದರು. ಶ್ರೀ ಡಾ. ಎನ್. ರಾಜೇಂದ್ರಪ್ರಸಾದ್ ಸ್ವಾಗತಿಸಿದರು. ಶ್ರೀ ಹೆಚ್. ಆರ್. ಗುರುಪ್ರಸಾದ್ ವಂದಿಸಿದರು. ಶ್ರೀಮತಿ ಬಿ. ಸುಶ್ಮಿತ ಕಾರ್ಯಕ್ರಮ ನಿರೂಪಿಸಿದರು.



ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ದಂತವೈದ್ಯ ಹೌಸ್ ಸರ್ಜನ್‌ಗಳ ಶಿಬಿರದಲ್ಲಿ ಸಂಜೆ 'ಕಪಿಲಾರತಿ'ಯನ್ನು ನೆರವೇರಿಸಲಾಯಿತು. ಶಿಬಿರಾರ್ಥಿಗಳು ಕಪಿಲಾ ಮಾತೆಗೆ ಜ್ಯೋತಿ ಬೆಳಗಿಸಿ ಭಕ್ತಿಯನ್ನು ಸಮರ್ಪಿಸಿದರು. (16 ಏಪ್ರಿಲ್ 2026)

ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿಗಳಿಗಾಗಿ ಶಿಬಿರ

## ಶಿಕ್ಷಣದ ಅಡಿಪಾಯ ಗಟ್ಟಿಯಾಗಿರಬೇಕು




ಸುತ್ತೂರು ಶ್ರೀಕ್ಷೇತ್ರದಲ್ಲಿ ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಶಿಬಿರವನ್ನು ಶ್ರೀ ವಿನಾಯಕ ಹೆಗಡೆಯವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಡಾ. ಸಿ.ಜಿ. ಬೆಟಸೂರಮಠ, ಸಂಚಾಲಕರು ಹಾಗೂ ಶಿಬಿರಾರ್ಥಿಗಳಿದ್ದಾರೆ. (28 ಏಪ್ರಿಲ್ 2026)

ಶಿಕ್ಷಣದ ಅಡಿಪಾಯ ಗಟ್ಟಿಯಾಗಿರಬೇಕು ಎಂದು ಮೈಸೂರಿನ ಇನ್ಫೋಸಿಸ್ ಅಭಿವೃದ್ಧಿ ಕೇಂದ್ರದ ಮುಖ್ಯಸ್ಥರಾದ ಶ್ರೀ ವಿನಾಯಕ ಹೆಗಡೆಯವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದ ತಾಂತ್ರಿಕ ವಿದ್ಯಾರ್ಥಿಗಳ ಶಿಬಿರವನ್ನು ದಿನಾಂಕ 28.4.2026ರಂದು ಉದ್ಘಾಟಿಸಿ ಅವರು ಮಾತನಾಡಿದರು. ಕಲಿಕೆಯ ಹಾದಿ ನಿರಂತರವಾಗಿರಬೇಕು. ಪುಸ್ತಕಗಳಿಂದ, ಸಮಾಜದಿಂದ, ಶಿಕ್ಷಕರಿಂದ ಅನೇಕ ವಿಚಾರಗಳನ್ನು ತಿಳಿಯುತ್ತಿರುತ್ತೇವೆ. ನಮ್ಮ ಏಳಿಗೆಗೆ ಕಾರಣರಾಗಿರುವ ತಂದೆ–ತಾಯಿಗಳು, ಗುರುಹಿರಿಯರಲ್ಲಿ ಸ್ಮರಣೀಯ ಭಾವವಿರಬೇಕು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಎಲ್ಲಾ ಕ್ಷೇತ್ರಗಳಲ್ಲಿಯೂ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದು ಅವಿಸ್ಮರಣೀಯ ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು, 21ನೇ ಶತಮಾನದ ಯುವಕರಲ್ಲಿ ತಾಳ್ಮೆ ತುಂಬಾ ಕಡಿಮೆ. ಆಕ್ರಮಣಶೀಲತೆ ಹೆಚ್ಚು, ಸೋಲುಗಳನ್ನು ಸಹಿಸುವ ಶಕ್ತಿ ಇರುವುದಿಲ್ಲ. ಇವರಲ್ಲಿ ಕ್ರಿಯಾಶೀಲತೆ ಹೆಚ್ಚಿದೆ. ಸಮಾಜದ ಪ್ರಗತಿಗೆ ಈ ಯುವ ಶಕ್ತಿಯ ಅವಶ್ಯಕತೆ ಇದೆ. ಆದರೆ, ಐಷಾರಾಮಿ ಜೀವನದ ಆಮಿಷಗಳಿಗೆ ಒಳಗಾಗಿ ದೇಶ ಕಟ್ಟುವ ಕಾರ್ಯದಲ್ಲಿ ಸೋಲುತ್ತಿದ್ದಾರೆ. ನೈತಿಕ ಪ್ರಜ್ಞೆ ಇಲ್ಲದಿರುವುದು, ಕಾನೂನಿನ ನಿರ್ಲಕ್ಷ್ಯ, ಹಿರಿಯರನ್ನು ಗೌರವಿಸದಿರುವುದು ದುರಂತ. ಈ ಶಿಬಿರವು ನಿಮಗೆ ಸಾಮಾಜಿಕ ಜವಾಬ್ದಾರಿ, ನೈತಿಕ ಪ್ರಜ್ಞೆ ಹಾಗೂ ಮನಃಶಾಂತಿಯನ್ನು ನೀಡುತ್ತದೆ ಎಂದು ಹೇಳಿದರು.

ವ್ಯಾಸಭಾರತಿ ತ್ರಿಯೋಗ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ರಾಘವೇಂದ್ರ ಪೈರವರು, ಭಾರತೀಯ ಸಂಸ್ಕೃತಿಯಲ್ಲಿರುವ ವೈವಿಧ್ಯಮಯ ಆಚರಣೆಗಳನ್ನು ವಿಶ್ವದ ಯಾವುದೇ ಮೂಲೆಯಲ್ಲೂ ಕಾಣಲು ಸಾಧ್ಯವಿಲ್ಲ. ಹುಟ್ಟಿನಿಂದ ಸಾಯುವವರೆಗೂ ಪ್ರತಿ ಹಂತಗಳಲ್ಲೂ ಒಂದೊಂದು ಆಚರಣೆ ಇರುತ್ತದೆ. ಇಲ್ಲಿಯ ಹಬ್ಬಗಳ ಆಚರಣೆಗಳು ವೈಶಿಷ್ಟ್ಯತೆಯಿಂದ ಕೂಡಿವೆ. ಪ್ರತಿಯೊಂದು ಆಚರಣೆಯ ಹಿಂದೆ ವೈಜ್ಞಾನಿಕ ಪರಿಕಲ್ಪನೆಗಳಿರುತ್ತವೆ. ಇಲ್ಲಿಯ ಜನರು ಋತುಮಾನಕ್ಕೆ ಅನುಗುಣವಾಗಿ ಆಹಾರವನ್ನು ಸೇವಿಸುವ ಹವ್ಯಾಸಗಳನ್ನು ಬೆಳೆಸಿಕೊಂಡಿದ್ದಾರೆ. ಆರೋಗ್ಯ, ಸಂತೋಷ ನಮ್ಮೊಳಗೆ ಇದೆ. ಅದನ್ನು ಭಗವಂತನ ಮೂಲಕ ಪಡೆಯಬೇಕು ಎಂಬುದು ನಮ್ಮೆಲ್ಲ ಆಚರಣೆಗಳ ಉದ್ದೇಶ. ಸಾತ್ವಿಕತೆಯ ಮೂಲಕ ದೈವಿಕತೆಯನ್ನು ಪಡೆಯಬೇಕು ಎಂದು ತಿಳಿಸಿದರು.

ಮೈಸೂರಿನ ಎಲ್‌ಅಂಡ್‌ಟಿ ಕಂಪೆನಿಯ ಮಾನವ ಸಂಪನ್ಮೂಲ ವ್ಯವಸ್ಥಾಪಕರಾದ ಶ್ರೀಮತಿ ರಶ್ಮಿ ಶಂಕರ್‌ರವರು, ಬದುಕಿನಲ್ಲಿ ಸಂಕಷ್ಟಗಳು ಎದುರಾಗುವುದು ಸಹಜ, ಅದನ್ನು ಎದುರಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಪ್ರಕೃತಿ ವಿಕೋಪಗಳು, ಅಪಘಾತಗಳು, ಆರೋಗ್ಯ, ತುರ್ತುಪರಿಸ್ಥಿತಿಗಳು ಹಾಗೂ ಹಣಕಾಸಿನ ಸಮಸ್ಯೆಗಳು ಬದುಕಿನ ಮೇಲೆ ತಮ್ಮದೇ ಆದ ಪರಿಣಾಮಗಳನ್ನು ಬೀರುತ್ತವೆ. ಪೂರ್ವ ತಯಾರಿ, ಪ್ರತಿಕ್ರಿಯೆ, ಪುನಃಸ್ಥಾಪನೆ ಹಾಗೂ ಶಮನಗಳೊಂದಿಗೆ ಇವುಗಳನ್ನು ನಿರ್ವಹಿಸಬಹುದು ಎಂದರು.

ಡಾ. ಎ.ಎಸ್. ಸಿಂಧು ಪ್ರಾರ್ಥಿಸಿದರು. ಡಾ. ಬಿ.ಎಸ್. ಹರೀಶ್ ಸ್ವಾಗತಿಸಿದರು. ಡಾ. ಎಸ್.ಎನ್ ದೀಪಾ ವಂದಿಸಿದರು. ಡಾ. ಎಸ್. ಪ್ರಜ್ಞಾ ಕಾರ್ಯಕ್ರಮ ನಿರೂಪಿಸಿದರು.




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ನಡೆದ 290ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಉಸ್ತಾದ್ ಡಾ. ಮೊಹಸಿನ್ ಖಾನ್‌ರವರು ಸಿತಾರ್ ವಾದನ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯದಲ್ಲಿ ಪಂ. ರಾಜೇಂದ್ರ ನಾಕೋಡ ಹಾಗೂ ಡಾ. ಅರ್ಚನಾರವರುಗಳಿದ್ದಾರೆ. (1 ಏಪ್ರಿಲ್ 2026)

# ಚಿತ್ರಕಲೆಯ ಬಗ್ಗೆ ಹೆಚ್ಚು ಆಸಕ್ತಿ ಬೆಳೆಸಿಕೊಳ್ಳಿ




ಚಿತ್ರಕಲೆಯ ಬಗ್ಗೆ ಎಲ್ಲರೂ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಜಂಟಿ ನಿರ್ದೇಶಕರ ಕಚೇರಿಯ ಚಿತ್ರಕಲಾ ವಿಷಯ ಪರಿವೀಕ್ಷಕ ಲಿಂಗಪ್ಪ ಪೂಜಾರ್ ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠವು ರಾಮಾನುಜ ರಸ್ತೆಯ ಬಾಲಜಗತ್ ಆವರಣದಲ್ಲಿ ದಿನಾಂಕ 3.4.20206 ರಂದು ಏರ್ಪಡಿಸಿದ್ದ 17ನೇ ಚಿತ್ರಕಲಾ ಶಿಬಿರಕ್ಕೆ ಚಿತ್ರ ಬಿಡಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು. ಸುಪ್ತ ಪ್ರತಿಭೆ ಮೊಳಕೆ ಹೊಡೆಯಲು ಇಂತಹ ಶಿಬಿರಗಳು ವೇದಿಕೆ ಕಲ್ಪಿಸಿಕೊಡುತ್ತವೆ. ತುಪ್ಪ ಮತ್ತೆ ಬೆಣ್ಣೆಯಾಗದು, ಆದರೆ ತುಪ್ಪದಿಂದ ಏನೆಲ್ಲಾ ವಸ್ತುಗಳನ್ನು ತಯಾರಿಸಬಹುದು. ಅದೇ ರೀತಿ ಮಕ್ಕಳು ಚಿಕ್ಕಂದಿನಿಂದಲೇ ಚಿತ್ರಕಲೆಯ ಬಗ್ಗೆ ಆಸಕ್ತಿ ವಹಿಸಿ, ಕಲಿಯಬೇಕು ಎಂದು ಅವರು ಸಲಹೆ ನೀಡಿದರು.

ಶಾಲಾ ಶಿಕ್ಷಣ ವಿಭಾಗದ ಸಹ ನಿರ್ದೇಶಕರಾದ ಶ್ರೀ ಎಂ. ಶಿವಮಾದಪ್ಪ ಮಾತನಾಡಿ, ಚಿತ್ರಕಲೆಯ ಬಗ್ಗೆ ಎಲ್ಲರಿಗೂ ಆಸಕ್ತಿ ಇರುತ್ತದೆ. ಮನದಲ್ಲಿರುವುದೇ ಚಿತ್ರಕಲೆಯ ರೂಪದಲ್ಲಿ ಮೂಡುತ್ತದೆ. ಆದರೆ ಅದಕ್ಕೊಂದು ಕೌಶಲದ ಚೌಕಟ್ಟು ಹಾಕುವ ಕೆಲಸವನ್ನು ಇಂತಹ ಶಿಬಿರಗಳಲ್ಲಿ ಶಿಕ್ಷಕರು ಮಾಡುತ್ತಾರೆ ಎಂದರು.

ಶಿಬಿರದ ಸಂಚಾಲಕರಾದ ಶ್ರೀ ಎಸ್.ಎಂ. ಜಂಬುಕೇಶ್ವರರವರು, ಕಳೆದ ಇಪ್ಪತ್ತು ವರ್ಷಗಳಿಂದ ಜೆಎಸ್‌ಎಸ್ ಮಹಾವಿದ್ಯಾಪೀಠವು ಚಿತ್ರಕಲಾ ಶಿಬಿರವನ್ನು ಏರ್ಪಡಿಸುತ್ತಾ ಬರುತ್ತಿದೆ. ಕೋವಿಡ್ ಸಂದರ್ಭದಲ್ಲಿ ಮೂರು ವರ್ಷ ಸ್ಥಗಿತವಾಗಿದ್ದರಿಂದ ಇದು 17ನೇ ಶಿಬಿರವಾಗಿದೆ. ಬಾಲಜಗತ್‌ನ ಸುಂದರ ಪರಿಸರದಲ್ಲಿ ಎರಡು ಬೃಹತ್ ಮರಗಳ ನೆರಳಿನಲ್ಲಿ ಸುತ್ತಲೂ ಮಕ್ಕಳು, ಮಧ್ಯದಲ್ಲಿ ಶಿಕ್ಷಕರು ಕುಳಿತು, 23 ದಿನಗಳ ಕಾಲ ಶಿಬಿರ ನಡೆಸಿಕೊಡಲಿದ್ದಾರೆ. ಒಂದು ದಿನ ಸುತ್ತೂರು ಕ್ಷೇತ್ರಕ್ಕೂ ಕರೆದುಕೊಂಡು ಹೋಗಲಾಗುತ್ತದೆ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಯಾಗಿದ್ದರು. ಶಿಕ್ಷಕರಾದ ಶ್ರೀ ಎನ್. ಚಾಮರಾಜಪ್ಪ ಪ್ರಾರ್ಥಿಸಿದರು. ಶ್ರೀ ಎಂ. ನಾಗೇಂದ್ರ ಸ್ವಾಗತಿಸಿದರು. ಶ್ರೀ ಅಲ್ಲಾಸಾಬ್ ಗಡಾದ್ ವಂದಿಸಿದರು. ಶ್ರೀ ಪಿ.ಎಸ್. ಸಲಬಣ್ಣನವರ್ ಕಾರ್ಯಕ್ರಮ ನಿರೂಪಿಸಿದರು. ಹಿರಿಯ ಶಿಬಿರಾರ್ಥಿ ಕು. ಲಿಖಿತಾ ಅನಿಸಿಕೆ ಹಂಚಿಕೊಂಡರು. ಶಿಕ್ಷಕರಾದ ಶ್ರೀ ಡಿ.ಎಸ್. ನಾಗರಾಜಪ್ಪ, ಶ್ರೀ ಬಿ.ಎಂ. ಕೆರೂರ್ ಮೊದಲಾದವರು ಉಪಸ್ಥಿತರಿದ್ದರು.

## ಮುನ್ನೆಚ್ಚರಿಕೆ ಮತ್ತು ಆರಂಭಿಕ ಪತ್ತೆಯೇ ಪ್ರಾಣರಕ್ಷೆಗೆ ದಾರಿ




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ 'ತಲೆ ಮತ್ತು ಕುತ್ತಿಗೆ ಕ್ಯಾನ್ಸರ್ ಜಾಗೃತಿ ಮಾಸ' ಕಾರ್ಯಕ್ರಮವನ್ನು ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಹಿರಿಯ ವಿಕಿರಣ ಕ್ಯಾನ್ಸರ್ ತಜ್ಞರಾದ ಡಾ. ವಿನಯಕುಮಾರ್ ಮುತ್ತಗಿಯವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಡಾ. ಎಸ್. ಸಂದೀಪ್, ಡಾ. ಎಂ.ಬಿ. ಭಾರತಿ, ಡಾ. ಸಿ.ಪಿ. ಮಧು, ಡಾ. ಡಿ. ನಾರಾಯಣಪ್ಪ, ಡಾ. ರವಿ ಕೃಷ್ಣಪ್ಪ, ಡಾ. ಪಿ.ಕೆ. ಕಿರಣ್, ಡಾ. ಸುಮಿತ್, ಡಾ. ಮಂಜುಳಾ, ಡಾ. ಅಮೃತಾ ಮೊದಲಾದವರುಗಳಿದ್ದಾರೆ. (23 ಏಪ್ರಿಲ್ 2026)

ಮುನ್ನೆಚ್ಚರಿಕೆ ಮತ್ತು ಆರಂಭಿಕ ಪತ್ತೆಯೇ ಪ್ರಾಣರಕ್ಷೆಗೆ ದಾರಿ ಎಂದು ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಹಿರಿಯ ವಿಕಿರಣ ಕ್ಯಾನ್ಸರ್ ತಜ್ಞರಾದ ಡಾ. ವಿನಯಕುಮಾರ್ ಮುತ್ತಗಿಯವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ದಿನಾಂಕ 23.4.2026ರಂದು ಆಯೋಜಿಸಿದ್ದ ತಲೆ ಮತ್ತು ಕುತ್ತಿಗೆ ಕ್ಯಾನ್ಸರ್ ಜಾಗೃತಿ ಮಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಿಗರೇಟ್, ಬೀಡಿ, ಗುಟ್ಕಾ ಮತ್ತು ತಂಬಾಕು ಅಗಿಯುವುದು ಕ್ಯಾನ್ಸರ್‌ಗೆ ಮುಖ್ಯ ಕಾರಣವಾಗಿದ್ದು, ಜನರಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸುವುದು ಅವಶ್ಯಕ. ತಲೆ ಮತ್ತು ಕುತ್ತಿಗೆಯ ಕ್ಯಾನ್ಸರನ್ನು ಆರಂಭಿಕ ಹಂತದಲ್ಲಿ ಪತ್ತೆಹಚ್ಚಿದರೆ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿದೆ. ಜನರು ತಂಬಾಕು ಮತ್ತು ಮದ್ಯಪಾನದಂತಹ ವ್ಯಸನಗಳಿಂದ ದೂರವಿರಬೇಕು ಮತ್ತು ಸಮರ್ಪಕ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು. ಯಾವುದೇ ಅಸಹಜ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ತಜ್ಞ ವೈದ್ಯರನ್ನು ಸಂಪರ್ಕಿಸಿ ತಪಾಸಣೆ ಮಾಡಿಸಿಕೊಳ್ಳುವುದು ಅತ್ಯಗತ್ಯ ಎಂದು ತಿಳಿಸಿದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಮಾತನಾಡಿ, ಪ್ರತಿವರ್ಷ ಏಪ್ರಿಲ್ 3ನೇ ವಾರ ತಲೆ ಮತ್ತು ಕುತ್ತಿಗೆ ಕ್ಯಾನ್ಸರ್ ಜಾಗೃತಿ ವಾರವನ್ನಾಗಿ ಆಚರಿಸಲಾಗುತ್ತದೆ. ಈ ವರ್ಷದ ಅಭಿಯಾನವು ಆರಂಭಿಕ ಪತ್ತೆ ಮತ್ತು ತಡೆಗಟ್ಟುವಿಕೆ ಜೀವ ಉಳಿಸುತ್ತದೆ ಎಂಬ

ಆಶಯದೊಂದಿಗೆ ನಡೆಯುತ್ತಿದೆ. ಇತ್ತೀಚಿನ ದಿನಗಳಲ್ಲಿ ಈ ಕಾಯಿಲೆಗೆ ಉತ್ತಮ ಔಷಧಿಗಳು ಲಭ್ಯವಿದೆ. ಕ್ಯಾನ್ಸರ್ ಎಂದರೆ ಭಯಭೀತರಾಗುವ ಅವಶ್ಯಕತೆ ಇಲ್ಲ. ಚಿಕಿತ್ಸೆ ಪಡೆದು ಸಾಮಾನ್ಯರಂತೆ ಜೀವಿಸಬಹುದು ಹಾಗೂ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಕಾಯಿಲೆಗೆ ಉತ್ತಮ ಚಿಕಿತ್ಸೆ ಲಭ್ಯವಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಆಂಕಾಲಾಜಿ ವಿಭಾಗದ ಪ್ರಾಧ್ಯಾಪಕರಾದ ಡಾ. ಪಿ.ಕೆ. ಕಿರಣ್‌ರವರು ಮಾತನಾಡಿ, ಈ ದಿನದ ಕಾರ್ಯಕ್ರಮದ ಉದ್ದೇಶ ತಲೆ ಮತ್ತು ಕುತ್ತಿಗೆಯ ಕ್ಯಾನ್ಸರ್ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸುವುದಾಗಿದೆ. ಇವತ್ತಿನ ದಿನಗಳಲ್ಲಿ ದೇಹದಲ್ಲಿ ಯಾವುದೇ ಲಕ್ಷಣಗಳು ಕಂಡು ಬಂದರೆ ಉದಾಹರಣೆಗೆ ಬಾಯಲ್ಲಿ ಹುಣ್ಣು, ಗಂಟಲು ನೋವು, ಧ್ವನಿಯಲ್ಲಿ ಅಸಹಜ ಬದಲಾವಣೆ ಅಥವಾ ಕರ್ಕಶ ಇದ್ದರೆ ಅದನ್ನು ನಿರ್ಲಕ್ಷಿಸದೆ ಬೇಗ ವೈದ್ಯರ ಬಳಿ ತೋರಿಸಿ ಚಿಕಿತ್ಸೆ ಪಡೆದರೆ ಕ್ಯಾನ್ಸರನ್ನು ಸೋಲಿಸಬಹುದು ಎಂದರು.

ಜೆಎಸ್‌ಎಸ್ ಆಸ್ಪತ್ರೆಯ ಕಿವಿ, ಮೂಗು ಮತ್ತು ಗಂಟಲು ವಿಭಾಗದ ಹಿರಿಯ ವೈದ್ಯರಾದ ಡಾ. ಎಂ.ಬಿ. ಭಾರತಿಯವರು ಮಾತನಾಡಿ, ಗುಟ್ಕಾ, ತಂಬಾಕು, ಎಲೆ ಅಡಿಕೆ, ಬೀಡಿ ಸೇವನೆಗಳಿಂದ ದೂರ ಇರಬೇಕು ಹಾಗೂ ಆಹಾರ ನುಂಗಲು ತೊಂದರೆ ಅಥವಾ ಗಂಟಲಿನಲ್ಲಿ ನೋವು, ಕುತ್ತಿಗೆ ಅಥವಾ ಮುಖದ ಭಾಗದಲ್ಲಿ ನೋವುರಹಿತ ಗಡ್ಡೆ ಅಥವಾ ಊತ ಈ ಲಕ್ಷಣಗಳು ಕಂಡುಬಂದರೆ ಅದಕ್ಕೆ ಬೇಗ ಚಿಕಿತ್ಸೆ ಪಡೆದುಕೊಳ್ಳಬೇಕು. ನಮ್ಮ ಆರೋಗ್ಯ ನಮ್ಮ ಕೈಯಲ್ಲೇ ಇದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ. ನಾರಾಯಣಪ್ಪ, ಸರ್ಜಿಕಲ್ ಆಂಕಾಲಜಿ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ರವಿ ಕೃಷ್ಣಪ್ಪ, ಇಎನ್‌ಟಿ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಎಸ್. ಸಂದೀಪ್, ಅರಿವಳಿಕೆ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಪಿ. ಮಂಜುಳ, ಆಂಕಾಲಜಿ ವಿಭಾಗದ ಡಾ. ಸುಮಿತ್, ಇಎನ್‌ಟಿ ವಿಭಾಗದ ಡಾ. ಅಮೃತಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

---

## ಲಸಿಕೆಯು ಸಾಂಕ್ರಾಮಿಕ ರೋಗಗಳ ವಿರುದ್ಧ ಪರಿಣಾಮಕಾರಿ ರಕ್ಷಣಾ ಕವಚ

ಲಸಿಕೆಯು ಸಾಂಕ್ರಾಮಿಕ ರೋಗಗಳ ವಿರುದ್ಧ ಅತ್ಯಂತ ಪರಿಣಾಮಕಾರಿ ರಕ್ಷಣಾ ಕವಚವಾಗಿದೆ ಎಂದು ಮೈಸೂರಿನ ಹಿರಿಯ ವೈದ್ಯರಾದ ಡಾ. ಜಾವೀದ್ ನಯೀಮ್‌ರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಜೆಎಸ್‌ಎಸ್ ಎಹೆಚ್‌ಇಆರ್ ಹಾಗೂ ವೈದ್ಯಕೀಯ ವಿಭಾಗದ ವತಿಯಿಂದ ದಿನಾಂಕ 24.4.2026 ರಂದು ಆಯೋಜಿಸಿದ್ದ ವಿಶ್ವ ಲಸಿಕಾ ದಿನಾಚರಣೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಾಂಕ್ರಾಮಿಕ ರೋಗಗಳಿಂದ ಉಂಟಾಗುವ ಸಾವುಗಳನ್ನು ತಡೆಯುವಲ್ಲಿ ಲಸಿಕಾಕರಣ ಅತ್ಯಂತ ಮಹತ್ವದಾಗಿದೆ. ಲಸಿಕಾಕರಣದ ಬಗ್ಗೆ ಸಮಾಜದಲ್ಲಿ ಇರುವ ತಪ್ಪು ಕಲ್ಪನೆಗಳನ್ನು ದೂರ ಮಾಡಿ ಜಾಗೃತಿ ಮೂಡಿಸುವುದು ವೈದ್ಯರ ಕರ್ತವ್ಯವಾಗಿದೆ.




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ 'ವಿಶ್ವ ಲಸಿಕಾ ದಿನಾಚರಣೆ' ಕಾರ್ಯಕ್ರಮವನ್ನು ಮೈಸೂರಿನ ಹಿರಿಯ ವೈದ್ಯರಾದ ಡಾ. ಜಾವೀದ್ ನಯೀಮ್‌ರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಡಾ. ಎಂ. ಸುರೇಶ್ ಬಾಬು, ಡಾ. ಸಿ.ಪಿ. ಮಧು, ಡಾ. ಮಾಂತಪ್ಪ ಮೊದಲಾದವರುಗಳಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸುವ ಮೂಲಕ ಆರೋಗ್ಯ ಸೇವೆಗಳ ಅಭಿವೃದ್ಧಿಗೆ ವೈದ್ಯರು ಮುಂದಾಗಬೇಕು. ಜೆಎಸ್‌ಎಸ್ ಸಂಸ್ಥೆಗಳ ಸಾಧನೆ ಶ್ಲಾಘನೀಯ. ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸಂಪೂರ್ಣ ಸೌಲಭ್ಯಗಳಿರುವ ಲಸಿಕಾ ಕೇಂದ್ರವನ್ನು ಸ್ಥಾಪಿಸಿರುವುದು ಪ್ರಶಂಸನೀಯರು ಎಂದರು.

ಗೌರವ ಅತಿಥಿಗಳಾಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಮಾತನಾಡಿ, ಸಾರ್ವಜನಿಕರು ಆಸ್ಪತ್ರೆಯ ಲಸಿಕಾ ಕೇಂದ್ರದ ಸೇವೆಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ವೈದ್ಯಕೀಯ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಎಂ. ಸುರೇಶ್ ಬಾಬುರವರು, ಜೆಎಸ್‌ಎಸ್ ಲಸಿಕಾ ಕೇಂದ್ರದಲ್ಲಿ ಲಭ್ಯವಿರುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ವೈದ್ಯಕೀಯ ವಿಭಾಗದ ಪ್ರಾಧ್ಯಾಪಕರಾದ ಡಾ. ಟಿ. ತಿಪ್ಪೇಸ್ವಾಮಿಯವರು 'ವಯಸ್ಕರ ಲಸಿಕೆ' ವಿಷಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಉಪ ಪ್ರಾಂಶುಪಾಲರಾದ ಡಾ. ಮಾಂತಪ್ಪರವರು ಉಪಸ್ಥಿತರಿದ್ದರು. ಜೆಎಸ್‌ಎಸ್ ಆಸ್ಪತ್ರೆಯ ಉಪ ವೈದ್ಯಕೀಯ ಅಧೀಕ್ಷಕರಾದ ಡಾ. ಎಂ.ಸಿ. ಪ್ರಸಾದ್ ರವರು ವಂದಿಸಿದರು.

□

## ವಿದ್ಯಾರ್ಥಿಗಳು ಮಾದಕ ವ್ಯಸನಗಳಿಂದ ದೂರವಿರಬೇಕು




ಮಕ್ಕಳ ಬಗ್ಗೆ ನೂರಾರು ಕನಸುಗಳನ್ನು ಹೊತ್ತು ತಮ್ಮ ಶಕ್ತಿಮೀರಿ ಶಿಕ್ಷಣ ಕೊಡಿಸುವ ಪೋಷಕರ ನಂಬಿಕೆಗಳಿಗೆ ವಿದ್ಯಾರ್ಥಿಗಳು ಬದ್ಧರಾಗಿರಬೇಕು. ತಮ್ಮ ಗುರಿಗಳನ್ನು ಮರೆಯಬಾರದು. ಚಂಚಲತೆ ಉಂಟುಮಾಡುವ ಅನೇಕ ಆಮಿಷಗಳು ವಿದ್ಯಾರ್ಥಿಗಳಿಗೆ ಎದುರಾಗಬಹುದು. ಅದರಲ್ಲಿಯೂ ವಿದ್ಯಾರ್ಥಿಗಳು ತಮ್ಮ ಕನಸು ಹಾಗೂ ಜೀವನವನ್ನು ನಾಶ ಮಾಡುವ ಮಾದಕ ವ್ಯಸನಗಳಿಂದ ದೂರವಿರಬೇಕು ಎಂದು ಮೈಸೂರು ನಗರ ಕೆ.ಆರ್. ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಡಿ.ಪಿ. ಧನರಾಜ್ ರವರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 28.4.2026 ರಂದು ಜರುಗಿದ ಮಾದಕ ವ್ಯಸನಗಳ ಬಗ್ಗೆ ಅನಾಮಧೇಯವಾಗಿ ದೂರು ನೀಡುವ ಪೋರ್ಟಲ್ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವುದು ವಿದ್ಯಾರ್ಥಿಗಳ ಜವಾಬ್ದಾರಿ. ಗುರಿ ಮರೆತು ಮಾದಕ ವ್ಯಸನಗಳಿಗೆ ಬಲಿಯಾದರೆ ಉಜ್ವಲ ಭವಿಷ್ಯ ನಾಶವಾಗುತ್ತದೆ. ಆದುದರಿಂದ ಮಾದಕ ವ್ಯಸನಗಳ ಕ್ರೂರ ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಅಗತ್ಯ. ಮಾದಕ ವ್ಯಸನಗಳಿಗೆ ಒಳಗಾಗುವವರನ್ನು ಎಚ್ಚರಿಸಿ ಅವರನ್ನು ಸರಿ ದಾರಿಗೆ ತರುವ ಜವಾಬ್ದಾರಿಯೂ ಕೂಡ ನಮ್ಮದಾಗಿರುತ್ತದೆ. ಕಾನೂನು ಬಾಹಿರವಾಗಿ ಮಾದಕ ವಸ್ತುಗಳನ್ನು ಸರಬರಾಜು ಮಾಡುವವರ ಮೇಲೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಲು ವಿದ್ಯಾರ್ಥಿಗಳ ಸಹಕಾರವೂ ಅಗತ್ಯ ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು, ಕೆ.ಆರ್. ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀಮತಿ ಪೂಜಾರವರು ಉಪಸ್ಥಿತರಿದ್ದರು. ಅಧ್ಯಾಪಕರಾದ ಡಾ. ಎಂ.ಪಿ. ಸೋಮಶೇಖರ್‌ರವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕಾಲೇಜಿನ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ದೇಶದ ಪ್ರಗತಿ ಹಾಗು ರಕ್ಷಣೆ ಸಂಶೋಧನೆಯಿಂದ ಮಾತ್ರ ಸಾಧ್ಯ




ಮೈಸೂರಿನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ವತಿಯಿಂದ ನಡೆದ 'ರಾಸಾಯನಿಕ ವಿಜ್ಞಾನದಲ್ಲಿ ಪ್ರಸ್ತುತ ಸಂಶೋಧನೆ ಮತ್ತು ನಾವೀನ್ಯತೆಗಳು' ವಿಷಯ ಕುರಿತ ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಡಾ. ಕೆ.ಎಸ್. ರಂಗಪ್ಪನವರು ಉದ್ಘಾಟಿಸಿ ಮಾತನಾಡಿದರು. (17 ಏಪ್ರಿಲ್ 2026)

ದೇಶದ ಪ್ರಗತಿ ಹಾಗು ರಕ್ಷಣೆ ಸಂಶೋಧನೆಯಿಂದ ಮಾತ್ರ ಸಾಧ್ಯ ಎಂದು ವಿಶ್ರಾಂತ ಕುಲಪತಿಗಳಾದ ಡಾ. ಕೆ.ಎಸ್. ರಂಗಪ್ಪರವರು ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ರಸಾಯನಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ 17.4.2026ರಂದು ನಡೆದ 'ರಾಸಾಯನಿಕ ವಿಜ್ಞಾನದಲ್ಲಿ ಪ್ರಸ್ತುತ ಸಂಶೋಧನೆ ಮತ್ತು ನಾವಿನ್ಯತೆಗಳು' ಕುರಿತಾದ ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಂಶೋಧನೆಯು ಒಂದು ಅಭ್ಯಾಸವಾಗಬೇಕು. ರಸಾಯನ ವಿಜ್ಞಾನಗಳು ನಾವಿನ್ಯತೆಗಳಿಗೆ ಬೆನ್ನೆಲುಬಾಗಿವೆ. ವಿಜ್ಞಾನ ಕೇವಲ ಫಲಿತಾಂಶಗಳನ್ನು ಪಡೆಯುವುದರ ಬಗ್ಗೆ ವಿವರಿಸುವುದಿಲ್ಲ. ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದರ ಬಗ್ಗೆ ವಿವರಿಸುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಯುವಜನತೆ ಸಂಶೋಧನೆಯಲ್ಲಿ ದೃಢವಾಗಿ ಮುಂದುವರೆದು, ಯಶಸ್ಸು ಸಾಧಿಸಬೇಕು ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಪ್ರೊ. ಕೆ. ಮಂಟೇಲಿಂಗುರವರು ಮಾತನಾಡಿ, ಇಂತಹ ಸಮ್ಮೇಳನವು ವೈಜ್ಞಾನಿಕ ಚಿಂತನೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಭವಿಷ್ಯದಲ್ಲಿ ಹಸಿರು ಮತ್ತು ಪರಿಸರ ಸ್ನೇಹಿ ಶಕ್ತಿಗಳು ಮುಖ್ಯವಾಗುತ್ತವೆ. ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಾವೀನ್ಯತೆ ಮತ್ತು ಸಂಶೋಧನೆಗಳ ಪಾತ್ರ ಮಹತ್ವವಾದುದು. ಜೊತೆಗೆ ಕುತೂಹಲ ಮತ್ತು ಉತ್ಸಾಹ

ಸಂಶೋಧನೆಯಲ್ಲಿ ಮಹತ್ತರ ಪಾತ್ರ ವಹಿಸುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ. ಪ್ರಶಾಂತ್ ಎಂ. ವಿಶ್ವನಾಥ್‌ರವರು, ರಸಾಯನಶಾಸ್ತ್ರವು ಅನ್ವೇಷಣೆಯ ಹೃದಯವಾಗಿದೆ. ರಸಾಯನಶಾಸ್ತ್ರದ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಬಹಳಷ್ಟು ಉತ್ತಮ ಅವಕಾಶಗಳಿವೆ. ವಿದ್ಯಾರ್ಥಿಗಳು ಕುತೂಹಲವನ್ನು ಬೆಳೆಸಿಕೊಂಡು ಸಂಶೋಧನೆಯನ್ನು ಕೈಗೊಳ್ಳಬೇಕಿದೆ. ಕೃತಕ ಬುದ್ಧಿಮತ್ತೆಯಿಂದ ಬಹಳಷ್ಟು ನಾವಿನ್ಯತೆಗಳು ಸಾಧ್ಯವಾಗುತ್ತವೆ ಎಂದರು.

ವೇದಿಕೆಯಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ. ರೇಚಣ್ಣರವರು, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಇ. ವಿಜಯಶೇಖರ್ ಉಪಸ್ಥಿತರಿದ್ದರು. ಅಧ್ಯಾಪಕರು ಹಾಗೂ ಅಧ್ಯಾಪಕೇತರ ವರ್ಗದವರು ಭಾಗವಹಿಸಿದ್ದರು.

ಕು. ದಿಶಾ ಡಿ. ರಾವ್ ಮತ್ತು ವೃಂದದವರು ಪ್ರಾರ್ಥಿಸಿದರು. ಕು. ಡಿ.ವೈ. ತೃಪ್ತಿ ಸ್ವಾಗತಿಸಿದರು. ಕು. ಆರ್. ದೀಕ್ಷಾ ವಂದಿಸಿದರು. ಕು. ಎಸ್. ಅಪರಂಜಿ ಕಾರ್ಯಕ್ರಮ ನಿರೂಪಿಸಿದರು.

ಉದ್ಘಾಟನೆ ನಂತರ 4 ಗೋಷ್ಠಿಗಳು ನಡೆದವು. ಬೆಂಗಳೂರು ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಬಿಶ್ವಜಿತ್ ಪಾಲ್, ಬೆಂಗಳೂರಿನ ಜೆಎಸ್‌ಎಸ್ ಅಕಾಡೆಮಿಯ ರಸಾಯನಶಾಸ್ತ್ರ ಪ್ರಾಧ್ಯಾಪಕರಾದ ಡಾ. ಬಿ. ಮಹೇಶ್, ಮೈಸೂರು ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗದ ಅಧ್ಯಕ್ಷರಾದ ಡಾ. ಬಸಪ್ಪ, ಮೈಸೂರು ಯುವರಾಜ ಕಾಲೇಜಿನ ರಸಾಯನಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ ಕೆ. ಅಜಯ್‌ಕುಮಾರ್ ಪ್ರಬಂಧ ಮಂಡಿಸಿದರು.



ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯುರ್ವೇದ, ವಾಕ್–ಶ್ರವಣ, ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರದಲ್ಲಿ ಸಂಜೆ 'ಕಪಿಲಾರತಿ'ಯನ್ನು ನೆರವೇರಿಸಲಾಯಿತು. ಶಿಬಿರಾರ್ಥಿಗಳು ಕಪಿಲಾ ಮಾತೆಗೆ ಭಕ್ತಿ ಭಾವದಿಂದ ಜ್ಯೋತಿ ಬೆಳಗಿಸಿ ಭಕ್ತಿಯನ್ನು ಸಮರ್ಪಿಸಿದರು. (9 ಏಪ್ರಿಲ್ 2026)

# ಶಿಕ್ಷಣದ ಯಾನದಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಆಯಾಮಗಳು ಪ್ರಧಾನ



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಿದ್ದ ಸ್ನಾತಕ ವಿಭಾಗಗಳ 2025–26 ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಪ್ರೊ. ಮೈಸೂರು ಕೃಷ್ಣಮೂರ್ತಿ, ಪ್ರೊ. ಬಿ.ವಿ. ಸಾಂಬಶಿವಯ್ಯನವರು, ಪ್ರಾಂಶುಪಾಲ ಡಾ. ಎಂ. ಪ್ರಭುರವರುಗಳಿದ್ದಾರೆ. (17 ಏಪ್ರಿಲ್ 2026)

ಶಿಕ್ಷಣದ ಯಾನದಲ್ಲಿ ಸಾಂಸ್ಕೃತಿಕ ಹಾಗೂ ಕ್ರೀಡಾ ಆಯಾಮಗಳು ಬಹಳ ಪ್ರಧಾನ ಸ್ಥಾನವನ್ನು ವಹಿಸುತ್ತವೆ ಎಂದು ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಮೈಸೂರು ಕೃಷ್ಣಮೂರ್ತಿಯವರು ಅಭಿಪ್ರಾಯಪಟ್ಟರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 17.4.2026ರಂದು ಆಯೋಜಿಸಿದ್ದ ಸ್ನಾತಕ ವಿಭಾಗಗಳ 2025–26 ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣಕಾರರಾಗಿ ಆಗಮಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಆಯಾಮದ ವ್ಯಕ್ತಿತ್ವವನ್ನು ರೂಪಿಸುವ ಕ್ಷೇತ್ರಗಳ ಕಡೆ ಹೆಚ್ಚಿನ ಗಮನ ನೀಡಬೇಕು, ಅವು ವಿದ್ಯಾರ್ಥಿಗಳಲ್ಲಿ ಹೊಸ ಹುರುಪನ್ನು ಮೂಡಿಸಿ ಔದ್ಯೋಗಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಗಟ್ಟಿಯಾಗಲು ಸಹಾಯ ಮಾಡುತ್ತವೆ. ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗುತ್ತಿರುವ ಭಯವನ್ನು ಹೋಗಲಾಡಿಸಲು ಸಾಂಸ್ಕೃತಿಕ ವೇದಿಕೆಗಳು ಕಾರಣವಾಗುತ್ತವೆ. ಇಂದಿನ ಯುವ ಜನತೆ ಅಭಿಮನ್ಯುವಿನ ಪರಾಕ್ರಮವವನ್ನು ಅನುಕರಿಸಿದರೂ ಜೀವನದ ಚಕ್ರವ್ಯೂಹವನ್ನು ಭೇದಿಸುವುದಷ್ಟೇ ಅಲ್ಲದೆ ಅದನ್ನು ಜಯಿಸಿ, ಹೊರಬರುವ ಸಾಮರ್ಥ್ಯವನ್ನು ರೂಢಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಷ್ಟ್ರಮಟ್ಟದ ಖೋಖೋ ಆಟಗಾರ್ತಿ ಕು. ಎಮ್. ವೀಣಾರವರು ಮಾತನಾಡಿ, ಗ್ರಾಮೀಣ ಪ್ರತಿಭೆಗಳ

ಅನಾವರಣ ಯಾವುದೇ ಲಿಂಗ ತಾರತಮ್ಯವಿಲ್ಲದೆ ಆಗಬೇಕಾಗಿದೆ. ಹೆಣ್ಣುಮಕ್ಕಳು ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗಲು ಕ್ರೀಡೆ ಬಹುಮುಖ್ಯ. ಹಾಗೆಯೇ ವಿದ್ಯಾರ್ಥಿಗಳ ಶಿಸ್ತು ಪಾಲನೆಗೆ ಕ್ರೀಡೆ ಮಾರ್ಗದರ್ಶನ ನೀಡುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಮಾತನಾಡಿ, ಕಾಲೇಜುಗಳು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳಾಗಬೇಕು. ಆಗ ಮಾತ್ರ ವ್ಯಕ್ತಿತ್ವ ವಿಕಸನ ಸಾಧ್ಯ. ಕ್ರೀಡಾ ಚಟುವಟಿಕೆಗಳಿಂದ ಸದೃಢ ದೇಹ ಮತ್ತು ಮನಸ್ಸಿನ ಜೊತೆಗೆ ಸ್ನೇಹ ಹಾಗೂ ಪರಸ್ಪರ ಗೌರವ ಸಾಧ್ಯವಾಗುತ್ತದೆ. ಸಾಂಸ್ಕೃತಿಕ ಪ್ರತಿಭೆ ಮತ್ತು ಕ್ರೀಡೆಯ ಜೊತೆಗೆ ಕೃತಕ ಬುದ್ಧಿ ಮತ್ತೆಯ ತಾಂತ್ರಿಕ ಜ್ಞಾನ ವಿದ್ಯಾರ್ಥಿಗಳಿಗೆ ಬಹುಮುಖ್ಯ. ಉದ್ಯೋಗದ ಭರವಸೆಯನ್ನು ಈ ತಂತ್ರಜ್ಞಾನ ಮೂಡಿಸುತ್ತದೆ ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು, ಪಠ್ಯದ ಜೊತೆಜೊತೆಗೆ ಪಠ್ಯೇತರ ಚಟುವಟಿಕೆಗಳು ಬಹಳ ಮುಖ್ಯ. ವಚನ ಸಾಹಿತ್ಯ, ಸಾಂಸ್ಕೃತಿಕ ವಿಚಾರಧಾರೆಗಳನ್ನು ಬೆಳೆಸುತ್ತದೆ. ವಿದ್ಯಾರ್ಥಿಗಳಲ್ಲಿ ಪಠ್ಯೇತರ ಕೌಶಲ್ಯಗಳನ್ನು ಹೆಚ್ಚಿಸುವುದು ಎಲ್ಲಾ ಶಿಕ್ಷಣ ಕ್ಷೇತ್ರಗಳ ಕರ್ತವ್ಯ ಎಂದರು.

ಕಾರ್ಯಕ್ರಮದಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಸಾಂಸ್ಕೃತಿಕ ಹಾಗೂ ಕ್ರೀಡಾ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಗೌರವಿಸಲಾಯಿತು. ಕು. ಅದಿತಿ ಹೆಗ್ಡೆ ಪ್ರಾರ್ಥಿಸಿದರು, ಕು. ಗಣೇಶ್ ಸ್ವಾಗತಿಸಿದರು, ಕು. ಸೂರ್ಯಪ್ರಕಾಶ್ ವಂದಿಸಿದರು. ಕು. ಎಸ್. ಸ್ಫೂರ್ತಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ವಿಭಾಗದ ಸಂಚಾಲಕರದ ಶ್ರೀ ವಿ. ಶಿವ ಹಾಗೂ ಕ್ರೀಡಾ ವಿಭಾಗದ ಸಂಚಾಲಕರಾದ ಶ್ರೀ ಪಿ. ಕಾರ್ತಿಕ್, ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

## ಜೆಎಸ್‌ಎಸ್ ಆಸ್ಪತ್ರೆಯಲ್ಲಿ 7ನೇ ರಾಷ್ಟ್ರಮಟ್ಟದ ಟೆಂಪೊರಲ್ ಬೋನ್ ಡಿಸೆಕ್ಷನ್ ತರಬೇತಿ ಕಾರ್ಯಾಗಾರ

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಇಎನ್‌ಟಿ ಮತ್ತು ಶಿರ ಹಾಗೂ ಕುತ್ತಿಗೆಯ ಶಸ್ತ್ರಚಿಕಿತ್ಸೆ ವಿಭಾಗದ ವತಿಯಿಂದ 7ನೇ ರಾಷ್ಟ್ರಮಟ್ಟದ ಟೆಂಪೊರಲ್ ಬೋನ್ ಡಿಸೆಕ್ಷನ್ ತರಬೇತಿ ಕಾರ್ಯಾಗಾರವನ್ನು ಏಪ್ರಿಲ್ 10 ಮತ್ತು 11 ರಂದು ಆಯೋಜಿಸಲಾಗಿತ್ತು. ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ಇಎನ್‌ಟಿ ವಿಭಾಗದ ವತಿಯಿಂದ ನಡೆಯುತ್ತಿರುವ ಈ ಕಾರ್ಯಾಗಾರವು ಶಸ್ತ್ರಚಿಕಿತ್ಸಕರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಮತ್ತು ಸುಧಾರಿಸುವ ಕಾರ್ಯಕ್ರಮವಾಗಿದೆ ಎಂದು ಅಭಿಪ್ರಾಯಪಟ್ಟರು. ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ. ನಾರಾಯಣಪ್ಪರವರು ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ಮೆಡಿಕಲ್ ಕಾಲೇಜಿನ ಇಎನ್‌ಟಿ ವಿಭಾಗದ ಮುಖ್ಯಸ್ಥರಾದ ಡಾ. ಪ್ರವೀಣ್ ಕುಮಾರ್, ಮೈಸೂರು

ಇಎನ್‌ಟಿ ಸಂಘದ ಅಧ್ಯಕ್ಷರಾದ ಡಾ. ಕೆ. ಸೋಮಸುಂದರ್‌ರವರು, ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ಅಪೋಲೋ ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ. ಸುನಿಲ್ ದತ್ ಮತ್ತು ಕಾಸರಗೋಡಿನ ಕೃಷ್ಣ ಆಸ್ಪತ್ರೆಯ ಡಾ. ಶ್ರೀನಿವಾಸ್ ಕಾಮತ್‌ರವರು ಭಾಗವಹಿಸಿದ್ದರು. ಕಿವಿ ಶಸ್ತ್ರಚಿಕಿತ್ಸೆಯು ಶ್ರವಣದೋಷದ ನಿವಾರಣೆ, ತಲೆತಿರುಗುವಿಕೆ ಹಾಗೂ ಸಮತೋಲನೆಗೆ ಸಂಬಂಧಿಸಿದ ತೊಂದರೆಗಳ ನಿವಾರಣೆಗೆ ಮಾಡುವ ಪ್ರಮುಖ ಶಸ್ತ್ರಚಿಕಿತ್ಸೆಯಾಗಿದ್ದು ಇದರ ಬಗ್ಗೆ ಪ್ರಾಯೋಗಿಕ ತರಬೇತಿಗಳನ್ನು ಕಾರ್ಯಾಗಾರದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಾಗಾರದಲ್ಲಿ ಕರ್ನಾಟಕ ಹಾಗೂ ಹೊರ ರಾಜ್ಯದ ಯುವ ಇಎನ್‌ಟಿ ಶಸ್ತ್ರಚಿಕಿತ್ಸಕರು ಭಾಗವಹಿಸಿ ಸದುಪಯೋಗವನ್ನು ಪಡೆದುಕೊಂಡರು.

ಕಾರ್ಯಾಗಾರದಲ್ಲಿ ಜೆಎಸ್‌ಎಸ್ ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ. ಎಂ.ಬಿ. ಭಾರತಿ, ಇಎನ್‌ಟಿ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಎಸ್. ಸಂದೀಪ್, ಡಾ. ಎ.ಆರ್. ಬಾಬು, ಡಾ. ಡಿ. ಸಂಧ್ಯಾ, ಡಾ. ಶಿಲ್ಪ, ಡಾ. ರಾಕೇಶ್, ಡಾ. ತನ್ವಿಮುನಿಸಾ, ಡಾ. ಅಮೂಲ್ಯ, ಡಾ. ಅಮೃತಾ, ಡಾ. ಸ್ವಾತಿ, ಡಾ. ಪ್ರಹ್ಲಾದ್ ಮತ್ತು ಆಸ್ಪತ್ರೆ ಸಿಬ್ಬಂದಿವರ್ಗದವರು ಹಾಜರಿದ್ದರು.

## ಸಂಗೀತ ಕ್ಷೇತ್ರಕ್ಕೆ ತ್ರಿಮೂರ್ತಿಗಳ ಕೊಡುಗೆ ಅನನ್ಯ

ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ತ್ರಿಮೂರ್ತಿಗಳಾದ ಶ್ರೀ ಶ್ಯಾಮಾ ಶಾಸ್ತ್ರಿಗಳು, ಶ್ರೀ ತ್ಯಾಗರಾಜರು ಮತ್ತು ಶ್ರೀ ಮುತ್ತುಸ್ವಾಮಿ ದೀಕ್ಷಿತರ ಕೊಡುಗೆ ಅನನ್ಯವಾದದ್ದು ಎಂದು ಸಂಗೀತ ವಿದುಷಿ ಡಾ. ಸುಕನ್ಯಾ ಪ್ರಭಾಕರ್‌ರವರು ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್‌ನಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಆಶೀರ್ವಾದದಿಂದ ಆಯೋಜಿಸಿದ್ದ ಸಂಗೀತ ತ್ರಿಮೂರ್ತಿಗಳ ಸಂಸ್ಮರಣೆ ಕಾರ್ಯಕ್ರಮದಲ್ಲಿ ಶ್ರೀ ಶ್ಯಾಮಾ ಶಾಸ್ತ್ರಿಗಳು, ಶ್ರೀ ತ್ಯಾಗರಾಜರು ಮತ್ತು ಶ್ರೀ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳ ಗಾಯನ ಕುರಿತು ಅವರು ಮಾತನಾಡಿದರು. ಸಂಗೀತ ತ್ರಿಮೂರ್ತಿಗಳ ಕೃತಿಗಳು ಭಕ್ತಿ, ಅಧ್ಯಾತ್ಮ ಹಾಗೂ ಲೋಕನೀತಿಯಿಂದ ಕೂಡಿದ್ದು, ಎಂದೆಂದಿಗೂ ಜನಮಾನಸದಲ್ಲಿ ಉಳಿಯುತ್ತದೆ. ಹೀಗಾಗಿ ಸಂಗೀತ ತ್ರಿಮೂರ್ತಿಗಳು ಸದಾಕಾಲ ಸ್ಮರಣೀಯರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಗೀತ ತ್ರಿಮೂರ್ತಿಗಳ ಜೀವನ, ಸಾಧನೆಗಳನ್ನು ವಿವರಿಸಿ, ತ್ರಿಮೂರ್ತಿಗಳ ಹಲವು ಕೃತಿಗಳನ್ನು ಶಿಷ್ಯರ ಮೂಲಕ ಪ್ರಸ್ತುತಿ ಪಡಿಸಿದರು. ವಯೊಲಿನ್‌ನಲ್ಲಿ ವಿದುಷಿ ಎಸ್.ಎ. ದಿವ್ಯಶ್ರೀ, ಮೃದಂಗದಲ್ಲಿ ವಿದ್ವಾನ್ ಬಿ.ಎಸ್. ಶುಭಾಂಗ್ ಸಾಥ್ ನೀಡಿದರು. ಕೊಯಮತ್ತೂರಿನ ಜಯಂ ಸೈಂಟಿಫಿಕ್ ಕಂಪನಿಯವರು ಕಾರ್ಯಕ್ರಮದ ಪ್ರಾಯೋಜಕತ್ವವನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಭಾದ ಕಾರ್ಯದರ್ಶಿಗಳಾದ ಶ್ರೀ ಟಿ.ಪಿ. ಪ್ರಭುಸ್ವಾಮಿ, ಟ್ರಸ್ಟಿಗಳಾದ ಪ್ರೊ. ಕೆ. ರಾಮಮೂರ್ತಿ ರಾವ್‌ರವರುಗಳು ಹಾಗೂ ಅಪಾರ ಸಂಖ್ಯೆಯಲ್ಲಿ ಸಂಗೀತಾಭಿಮಾನಿಗಳು ಉಪಸ್ಥಿತರಿದ್ದರು.

## ಶ್ರೀ ಎಂ.ಪಿ. ಬಗಲಿಯವರಿಗೆ ಶ್ರದ್ಧಾಂಜಲಿ



ಜೆಎಸ್‌ಎಸ್ ಮಹಾವಿದ್ಯಾಪೀಠದ ಧಾರವಾಡ ವಿಭಾಗದ ಆಡಳಿತಾಧಿಕಾರಿಗಳಾಗಿದ್ದ ಶ್ರೀ ಎಂ.ಪಿ. ಬಗಲಿಯವರು ದೈವಾಧೀನರಾದ ಹಿನ್ನೆಲೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಚಿತ್ರದಲ್ಲಿ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಕಾರ್ಯದರ್ಶಿಗಳಾದ ಪ್ರೊ. ಎಸ್. ಶಿವಕುಮಾರಸ್ವಾಮಿ, ವಿವಿಧ ವಿಭಾಗಗಳ ನಿರ್ದೇಶಕರುಗಳು ಮತ್ತು ಸಿಬ್ಬಂದಿವರ್ಗದವರಿದ್ದಾರೆ. (29 ಮಾರ್ಚ್ 2026)

ಜೆಎಸ್‌ಎಸ್ ಮಹಾವಿದ್ಯಾಪೀಠದ ಧಾರವಾಡ ವಿಭಾಗದಲ್ಲಿ ಆಡಳಿತಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದ ಶ್ರೀ ಎಂ.ಪಿ. ಬಗಲಿಯವರು ದಿನಾಂಕ 29.3.2026 ರಂದು ದೈವಾಧೀನರಾದರು. ದಿವಂಗತರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಶ್ರದ್ಧಾಂಜಲಿ ಸಭೆ ಏರ್ಪಡಿಸಿ ಗೌರವ ಸಲ್ಲಿಸಲಾಯಿತು.

ದಿವಂಗತ ಶ್ರೀ ಎಂ.ಪಿ. ಬಗಲಿಯವರ ಕುರಿತು ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಮಾತನಾಡಿ ಶ್ರೀಯುತರು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಉಪ ಕುಲಸಚಿವರಾಗಿ, ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ ಕುಲಸಚಿವರಾಗಿ ಸೇವೆ ಸಲ್ಲಿಸಿದ್ದರು. ಆಡಳಿತದಲ್ಲಿ ಉತ್ತಮ ಅನುಭವವನ್ನು ಹೊಂದಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಧಾರವಾಡ ವಿಭಾಗದಲ್ಲಿ ಆಡಳಿತಾಧಿಕಾರಿಗಳಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದರು. ಶಾಂತ ಸ್ವಭಾವದವರಾಗಿದ್ದರು. ಎಲ್ಲರಿಗೂ ಚಿರಪರಿಚಿತರಾಗಿದ್ದು, ಕರ್ತವ್ಯನಿಷ್ಠರಾಗಿ ಶಿಸ್ತನ್ನು ರೂಢಿಸಿಕೊಂಡಿದ್ದರು. ಸಂಸ್ಥೆಯೊಂದಿಗೆ ಉತ್ತಮವಾದ ಒಡನಾಟ ಹೊಂದಿದ್ದ ಶ್ರೀಯುತರು ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಧಾರವಾಡದಲ್ಲಿ ವಿಸ್ತರಿಸಲು ಕಾರಣೀಭೂತರು ಎಂದು ತಿಳಿಸಿದರು.

ದಿವಂಗತರನ್ನು ಕುರಿತು ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ನುಡಿನಮನ ಸಲ್ಲಿಸಿದರು.

ಶ್ರೀ ಎಂ.ಪಿ. ಬಗಲಿಯವರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿ, ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್. ಶಿವಕುಮಾರಸ್ವಾಮಿಯವರು ಹಾಗೂ ವಿಭಾಗಗಳ ನಿರ್ದೇಶಕರುಗಳು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

# ಆಹಾರೋತ್ಪಾದನೆಯಲ್ಲಿ ಭಾರತ ಸ್ವಾವಲಂಬಿ




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ವತಿಯಿಂದ ನಡೆದ ‘ಸಸ್ಟೇನಬಲ್ ಪ್ಯಾರಡೈಮ್ಸ್ : ಇನೋವೇಟಿವ್ ಸಲ್ಯೂಷನ್ಸ್ ಫಾರ್ ಮಾಡರ್ನ್ ಬಟಾನಿಕಲ್ ಚಾಲೆಂಜಸ್ 2026’ ಎಂಬ ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಪ್ರೊ. ಎ.ಹೆಚ್. ರಾಜಾಸಾಬ್‌ರವರು ಉದ್ಘಾಟಿಸಿದರು. (28 ಮಾರ್ಚ್ 2026)

ಭಾರತ ಸ್ವಾತಂತ್ರ್ಯಪೂರ್ವದಲ್ಲಿ ಹಲವಾರು ಸವಾಲುಗಳನ್ನು ಎದುರಿಸುತ್ತಿತ್ತು. ಅವುಗಳಲ್ಲಿ ಮೂಲಭೂತ ಆಹಾರ ಉತ್ಪಾದನೆ ಮತ್ತು ಅವುಗಳ ಆಮದು ವಿಚಾರವು ಒಂದಾಗಿತ್ತು. ಇಂದು ಭಾರತ ಮೂಲಭೂತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿದೆ ಎಂದು ಬೆಂಗಳೂರಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎ.ಹೆಚ್. ರಾಜಸಾಬ್‌ರವರು ಹೇಳಿದರು.

ಮೈಸೂರು ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ 28.3.2026 ರಂದು ನಡೆದ ‘ಸಸ್ಟೇನಬಲ್ ಪ್ಯಾರಡೈಮ್ಸ್: ಇನೋವೇಟಿವ್ ಸೆಲ್ಯೂಷನ್ಸ್ ಫಾರ್ ಮಾಡರ್ನ್ ಬೊಟಾನಿಕಲ್ ಚಾಲೆಂಜಸ್ 2026’ ಎಂಬ ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಭಾರತ ಇಂದು ಹಲವು ವಿಚಾರಗಳಲ್ಲಿ ಸ್ವಾವಲಂಬನೆ ಸಾಧಿಸಿದ್ದರೂ ಜನಸಂಖ್ಯೆಯ ಏರಿಕೆಯಿಂದ ಮೂಲಭೂತ ಆಹಾರಗಳ ಉತ್ಪಾದನೆಯಲ್ಲಿ ಪೂರ್ಣ ಪ್ರಮಾಣದ

ಸ್ವಾವಲಂಬನೆ ಸಾಧ್ಯವಾಗುತ್ತಿಲ್ಲ. ಇದರಿಂದ ಆಹಾರ ಪದಾರ್ಥಗಳ ಉತ್ಪಾದನೆ ಮತ್ತು ಬಳಕೆಯ ನಡುವೆ ಅಸಮತೋಲನವನ್ನು ಎದುರಿಸುತ್ತಿದ್ದೇವೆ. ಭಾರತೀಯ ಕೃಷಿ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳಿಗೆ ತಾಂತ್ರಿಕ ಪರಿಹಾರೋಪಾಯಗಳಿವೆ. ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನದಿಂದ ಮಣ್ಣಿನ ಪರೀಕ್ಷೆ, ಮಣ್ಣಿನ ಸತ್ವದ ಅಭಿವೃದ್ಧಿಯನ್ನು ಕೈಗೊಳ್ಳಬಹುದು ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಕೆ.ಎನ್. ಅಮೃತೇಶ್‌ರವರು ಆಶಯನುಡಿಗಳನ್ನಾಡುತ್ತಾ ಬೆಳೆಗಳ ರೋಗ ನಿರ್ಮೂಲನೆಗೆ ಸೂಕ್ಷ್ಮಾಣುಗಳನ್ನು ಬಳಸುವ ಪ್ರವೃತ್ತಿ ಹೆಚ್ಚುತ್ತಿದೆ. ಬೆಳೆ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಸಂಶೋಧನೆಯನ್ನು ವೇಗಗೊಳಿಸುವುದು ಅತ್ಯವಶ್ಯಕ. ಆಧುನಿಕ ಕೃಷಿ ಸೂಕ್ಷ್ಮಾಣು ಆಧಾರಿತ ಪರಿಹಾರಗಳತ್ತ ಸಾಗುತ್ತಿದ್ದು, ಭೂಮಿಯ ಸಂಪನ್ಮೂಲಗಳು ನಮ್ಮ ಅಗತ್ಯಗಳನ್ನು ಪೂರೈಸುತ್ತವೆಯೇ ಹೊರತು ದುರಾಸೆಗಳನ್ನಲ್ಲ ಎಂದು ತಿಳಿಸಿದರು.

ವಿಚಾರ ಸಂಕಿರಣ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರರಾದ ಪ್ರೊ. ಬಿ.ವಿ ಸಾಂಬಶಿವಯ್ಯನವರು ಮಾತನಾಡಿ, ವೇಗವಾಗಿ ಬದಲಾಗುತ್ತಿರುವ, ಹವಾಮಾನ, ಜೀವ ವೈವಿಧ್ಯತೆಯ ನಾಶ ಹಾಗೂ ಆಹಾರ ಭದ್ರತೆಯ ಸಮಸ್ಯೆಗಳು ಪರಸ್ಪರ ಸಂಬಂಧ ಹೊಂದಿವೆ. ಈ ಎಲ್ಲಾ ಸವಾಲುಗಳನ್ನು ಎದುರಿಸಲು ಕೃತಕ ಬುದ್ಧಿಮತೆ ಆಧಾರಿತ ಸಂಶೋಧನೆ, ನಿಖರ ಜೈವಿಕ ತಂತ್ರಜ್ಞಾನ, ಉನ್ನತ ಮಟ್ಟದ ಸಸ್ಯಶಾಸ್ತ್ರ ಸಂಶೋಧನಾತ್ಮಕ ಅಧ್ಯಯನ ಹಾಗೂ ಬೆಳೆಗಳ ಡಿಜಿಟಲ್ ಮಾದರಿಗಳ ಅಭಿವೃದ್ಧಿ ಮುಖ್ಯ ಪರಿಹಾರಗಳಾಗಿವೆ ಎಂದು ಹೇಳಿದರು.

ತಾಂತ್ರಿಕ ಗೋಷ್ಠಿಯ ಮೊದಲ ಅವಧಿಯಲ್ಲಿ ಭಾರತೀಯ ಸಸ್ಯ ಸಮೀಕ್ಷೆಯ ಮಾಜಿ ನಿರ್ದೇಶಕರಾದ ಡಾ. ಎಂ. ಸಂಜಪ್ಪನವರು 'ಭಾರತದ ಸಸ್ಯ ವೈವಿಧ್ಯತೆ: ಒಂದು ಅವಲೋಕನ ಎಂಬ ವಿಷಯ ಮೇಲೆ ಉಪನ್ಯಾಸ ನೀಡಿ, ಭಾರತದಲ್ಲಿನ ವಿಭಿನ್ನ ಪರಿಸರ ವ್ಯವಸ್ಥೆಗಳು ಮತ್ತು ಸಸ್ಯ ವೈವಿಧ್ಯತೆಯ ಸಮಗ್ರ ಚಿತ್ರಣವನ್ನು ನೀಡಿದರು.

ಎರಡನೇ ಅವಧಿಯಲ್ಲಿ 'ಎಥ್ನೊಬಾಟನಿ ಮತ್ತು ಹೊಸ ಔಷಧೀಯ ಸಸ್ಯಗಳ ಹುಡುಕಾಟ– ಪರಂಪರೆಯ ಜ್ಞಾನ ಸಂರಕ್ಷಣೆಯ ಮಹತ್ವ' ಕುರಿತು ಡಾ. ರಾಘವೇಂದ್ರರಾವ್‌ರವರು ಮಾತನಾಡುತ್ತಾ, ಆಧುನಿಕ ಸಮಸ್ಯೆಗಳನ್ನು ಪರಿಹರಿಸಲು ಮೂಲ ನಿವಾಸಿಗಳಿಂದ ಮಾಹಿತಿ ಸಂಗ್ರಹಿಸುವುದು ಅತ್ಯಗತ್ಯವಾಗಿದೆ. ಭಾರತವು ತನ್ನ ಸಮೃದ್ಧ ಔಷದೀಯ ಸಸ್ಯ ಸಂಪತ್ತನ್ನು ಬಳಸಿಕೊಂಡು ಜಾಗತಿಕ ಮಟ್ಟದ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿದರೆ ವಿಶ್ವಮಟ್ಟದಲ್ಲಿ ಮುಂಚೂಣಿಯಲ್ಲಿ ನಿಲ್ಲಬಹುದೆಂದು ಅಭಿಪ್ರಾಯಪಟ್ಟರು.

ಕು. ಭೂಮಿಕಾ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಸ್ವಾಗತಿಸಿದರು. ಶ್ರೀ ಎನ್. ಧನುಷ್ ಕಾರ್ಯಕ್ರಮ ನಿರೂಪಿಸಿದರು. ವಿಭಾಗದ ಮುಖ್ಯಸ್ಥರು ಮತ್ತು ಸಂಚಾಲಕರಾದ ಡಾ. ವಿ. ಬಿಳಿಗಿರಿರಂಗ ಉಪಸ್ಥಿತರಿದ್ದರು ವಿವಿಧ ಕಾಲೇಜುಗಳ ಉಪನ್ಯಾಸರುಗಳು, ಸಂಶೋಧಕರು ಮತ್ತು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ವ್ಯವಸ್ಥಿತ ಸಿದ್ಧತೆ ಮತ್ತು ಬದ್ಧತೆ ಅಗತ್ಯ




ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ 'ವಿದ್ಯಾರ್ಥಿಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತಾ ತಂತ್ರ ಮತ್ತು ವೃತ್ತಿ ಸಮಾಲೋಚನೆ' ಎಂಬ ವಿಷಯವನ್ನು ಕುರಿತ ಒಂದು ದಿನದ ಕಾರ್ಯಾಗಾರವನ್ನು ಡಾ. ಈ. ಶಿವಪ್ರಸಾದ್‌ರವರು ಉದ್ಘಾಟಿಸಿ ಮಾತನಾಡಿದರು. (7 ಏಪ್ರಿಲ್ 2026)

ಸ್ಪರ್ಧಾತ್ಮಕ ಪರೀಕ್ಷೆಗಳು ವಿದ್ಯಾರ್ಥಿಗಳ ವೃತ್ತಿ ಜೀವನವನ್ನು ರೂಪಿಸುವಲ್ಲಿ ಮತ್ತು ಭವಿಷ್ಯವನ್ನು ಭದ್ರಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅದಕ್ಕಾಗಿ ವ್ಯವಸ್ಥಿತ ಸಿದ್ಧತೆ ಮತ್ತು ಬದ್ಧತೆ ಅಗತ್ಯ ಎಂದು ನಂಜನಗೂಡು ನಗರಸಭೆ ಆಯುಕ್ತರಾದ ಶ್ರೀ ಎಂ. ಬಸವರಾಜು ಹೇಳಿದರು.

ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಘಟಕ, ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಉದ್ಯೋಗ ಮಾರ್ಗದರ್ಶನ ಮತ್ತು ಸಮಾಲೋಚನಾ ಕೋಶಗಳ ಸಹಯೋಗದಲ್ಲಿ ದಿನಾಂಕ 7.4.2026ರಂದು ಏರ್ಪಡಿಸಿದ್ದ 'ವಿದ್ಯಾರ್ಥಿಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತಾ ತಂತ್ರ ಮತ್ತು ವೃತ್ತಿ ಸಮಾಲೋಚನೆ' ಎಂಬ ವಿಷಯ ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜ್ಞಾನಾನ್ನ-ದಾಸೋಹದ ಧ್ಯೇಯದೊಂದಿಗೆ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ, ಆರೋಗ್ಯ, ಕೃಷಿ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಧ್ಯಾತ್ಮಿಕ ಚಿಂತನೆಯೊಂದಿಗೆ ಗಣನೀಯವಾದ ಸಾಧನೆ ಮಾಡುವುತ್ತಿರುವ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ಶ್ಲಾಘನೀಯ. ಸಾಧನೆಯ ಹಾದಿಯಲ್ಲಿ ಸಾಗುತ್ತಿರುವ ಕಲಿಕಾರ್ಥಿಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಇಂತಹ ಕಾರ್ಯಾಗಾರ ಉತ್ತೇಜನದಾಯಕವಾಗಿದೆ ಎಂದು ಹೇಳಿದರು.

ಅರಸೀಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಹಾಗೂ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಡಾ. ಈ. ಶಿವಪ್ರಸಾದ್ ಮಾತನಾಡುತ್ತಾ, ಯಶಸ್ಸಿನ ಗುಟ್ಟು ಯಾವಾಗಲೂ ಪರಿಶ್ರಮ ಮತ್ತು ಬದ್ಧತೆಯ ಅಧ್ಯಯನವನ್ನು ಅವಲಂಬಿಸಿರುತ್ತದೆ. ಸಾಧನೆಯ ಮೆಟ್ಟಿಲನ್ನೇರ ಬಯಸುವ ಸ್ಪರ್ಧಾಕಾಂಕ್ಷಿಗಳು ಶ್ರಮ

ಪಡಬೇಕು. ಸಾಧನೆ ಮಾಡಿ ಜನಮಾನಸದಲ್ಲಿ ಸಾರ್ವಕಾಲಿಕವಾಗಿ ಉಳಿಯಬೇಕೆಂದು ಹೇಳಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೆಎಎಸ್ ಶ್ರೇಣಿಯ ಕಚೇರಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಶಿವಕುಮಾರ್ ಕಾಸನೂರು ಮಾತನಾಡಿ ಅಧ್ಯಯನದಲ್ಲಿ ಬದ್ಧತೆ, ಸಮಯಪ್ರಜ್ಞೆ, ವಿಶ್ಲೇಷಣಾ ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕು. ವ್ಯಕ್ತಿತ್ವ ವಿಕಸನದೊಂದಿಗೆ ಓದಿನಲ್ಲಿ ತೃಪ್ತಿ ಮತ್ತು ವೃತ್ತಿಯಲ್ಲಿ ಸಂತೃಪ್ತಿಯನ್ನು ಅನುಭವಿಸುವಂತಾಗಬೇಕು. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯೋಜಿತ ಸಿದ್ಧತೆಯ ಪ್ರಾಮುಖ್ಯತೆಯನ್ನು ಅರಿಯಬೇಕೆಂದು ಹೇಳಿದರು.

ಪ್ರಾಂಶುಪಾಲರಾದ ಡಾ. ಸಿ.ಎಸ್. ಹೊನ್ನೇಗೌಡ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಘಟಕದ ವತಿಯಿಂದ ಕಾಲ ಕಾಲಕ್ಕೆ ನಡೆಸುವ ತರಬೇತಿ ಆಧಾರಿತ ತರಗತಿಗಳು, ಸಂಪನ್ಮೂಲ ವ್ಯಕ್ತಿಗಳಿಂದ ದೊರೆಯುವ ವಿಶೇಷ ಉಪನ್ಯಾಸಗಳೊಂದಿಗೆ ಸ್ಪರ್ಧಾಕಾಂಕ್ಷಿ ವಿದ್ಯಾರ್ಥಿಗಳು ಕಾಲೇಜಿನ ಗ್ರಂಥಾಲಯದ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಆ ಮುಖೇನ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನದ ಕಾಲಘಟ್ಟದಲ್ಲಿ ಜಯಶೀಲರಾಗಬೇಕು ಎಂದು ಹೇಳಿದರು.

ಪ್ರಥಮ ದರ್ಜೆ ಗುತ್ತಿಗೆದಾರರು ಹಾಗೂ ಸಮಾಜ ಸೇವಕರಾದ ಶ್ರೀ ಯು.ಎನ್. ಪದ್ಮನಾಭರಾವ್ ಮಾತನಾಡಿ, ಸರ್ಕಾರ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗವನ್ನರಸಿ ಹೋಗುವುದಾದರೆ ಸಮಚಿತ್ತದಿಂದ ಮುನ್ನಡೆಯಬೇಕು. ಶಿಕ್ಷಣ ಸಂಸ್ಥೆಯ ಧ್ಯೇಯೋದ್ದೇಶ ಮತ್ತು ಪೋಷಕರ ಕನಸನ್ನು ನನಸಾಗಿಸುವಲ್ಲಿ ವಿದ್ಯಾರ್ಥಿಗಳು ಉತ್ತಮ ಗುರಿಯೊಂದಿಗೆ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕೆಂದು ಹೇಳಿದರು.

ಕಾರ್ಯಾಗಾರದಲ್ಲಿ ಮೂರು ತಾಂತ್ರಿಕ ಗೋಷ್ಠಿಗಳು ನಡೆದವು. ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಘಟಕದ ಸಂಚಾಲಕರಾದ ಶ್ರೀಮತಿ ಎಂ.ಎಂ. ಶ್ವೇತ, ಉದ್ಯೋಗ ಮಾರ್ಗದರ್ಶನ ಹಾಗೂ ಸಮಾಲೋಚನಾ ಕೋಶದ ಸಂಚಾಲಕರಾದ ಶ್ರೀಮತಿ ಎಂ.ಎಸ್. ದೀಪಾಲಿ, ಕಚೇರಿ ಅಧೀಕ್ಷಕರಾದ ಶ್ರೀ ಕೆ.ವಿ. ಸುಂದರರಾಜು, ಅಧ್ಯಾಪಕರು, ಅಧ್ಯಾಪಕೇತರರು ಇದ್ದರು. ಕು. ಕೀರ್ತನ ಮತ್ತು ಕು. ತೀರ್ಥನ ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಎಂ.ಎಂ. ಶ್ವೇತ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಹೆಚ್.ಆರ್. ಗುರು ವಂದಿಸಿದರು ಹಾಗೂ ಕು. ಟಿ.ಎಸ್. ಮಾದಲಾಂಬಿಕೆ ಕಾರ್ಯಕ್ರಮ ನಿರೂಪಿಸಿದರು.

□

## ಕ್ಷಯ ರೋಗ ನಿರ್ಮೂಲನೆ ನಮ್ಮೆಲ್ಲರ ಹೊಣೆ

ಕ್ಷಯರೋಗವನ್ನು ಕೊನೆಗೊಳಿಸುವುದು ಸಾಧ್ಯತೆಯ ವಿಷಯವಲ್ಲ ಇದು ನಾಯಕತ್ವ ಮತ್ತು ಸಾಮಾಜಿಕ ಕ್ರಿಯೆಯ ವಿಷಯವಾಗಿದೆ ಎಂದು ಜೆಎಸ್ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ನಾರಾಯಣಪ್ಪನವರು ತಿಳಿಸಿದರು.

ಮೈಸೂರಿನ ಜೆಎಸ್ಎಸ್ ಸ್ಕೂಲ್ ಆಫ್ ನರ್ಸಿಂಗ್, ಜೆಎಸ್ಎಸ್ ಆಸ್ಪತ್ರೆಯ ಮೈಕ್ರೋಬಯಾಲಜಿ ವಿಭಾಗ ಹಾಗೂ ಶ್ವಾಸಕೋಶ ವಿಭಾಗ ಇವರುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 1.4.2026ರಂದು ಜೆಎಸ್ಎಸ್ ಆಸ್ಪತ್ರೆಯಲ್ಲಿ ನಡೆದ ವಿಶ್ವ ಕ್ಷಯರೋಗ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಪ್ರತಿ ವರ್ಷವು ಮಾರ್ಚ್ 24 ರಂದು ವಿಶ್ವ ಕ್ಷಯರೋಗ ದಿನವನ್ನು ಆಚರಿಸಲಾಗುತ್ತದೆ. ಈ ಕಾರ್ಯಕ್ರಮದ ಮೂಲ ಉದ್ದೇಶ ಸಮಯೋಚಿತ ಅರಿವು ಮತ್ತು ಚಿಕಿತ್ಸೆಯಿಂದ



ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್, ಜೆಎಸ್‌ಎಸ್ ಆಸ್ಪತ್ರೆಯ ಮೈಕ್ರೋಬಯಾಲಜಿ ವಿಭಾಗ ಹಾಗೂ ಶ್ವಾಸಕೋಶ ವಿಭಾಗ ಇವುಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಕ್ಷಯರೋಗ ದಿನಾಚರಣೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಲಾಯಿತು. (1 ಏಪ್ರಿಲ್ 2026)

ಕ್ಷಯರೋಗವನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದು ಎಂಬುದಾಗಿದೆ. ವಿಶ್ವ ಕ್ಷಯರೋಗದ ಗಂಭೀರತೆಯ ಬಗ್ಗೆ ಜಾಗೃತಿ ಮೂಡಿಸಿ ಅದನ್ನು ತಡೆಗಟ್ಟಲು ಕ್ರಮಕೈಗೊಳ್ಳಬೇಕು ಎಂದರು.

ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ವಿಶ್ವದೆಲ್ಲೆಡೆ ಅನೇಕ ಜನರು ಕ್ಷಯರೋಗಕ್ಕೆ ತುತ್ತಾಗಿ ಸಾವನ್ನಪ್ಪಿರುವ ಬಗ್ಗೆ ಮಾಹಿತಿಯನ್ನು ತಿಳಿಸಿದರು. ಇದು ಒಂದು ದಿನದ ಜಾಗೃತಿ ಮಾತ್ರವಲ್ಲ, ಬದಲಿಗೆ ಕ್ಷಯರೋಗವನ್ನು ನಿರ್ಮೂಲನೆ ಮಾಡುವ ಜಾಗತಿಕ ಬದ್ಧತೆಯಾಗಿದೆ ಎಂದು ತಿಳಿಸಿದರು.

ಆಸ್ಪತ್ರೆಯ ಉಪನಿರ್ದೇಶಕರಾದ ಡಾ. ಎಂ.ಎನ್. ಸುಮನಾರವರು ಕ್ಷಯರೋಗವು ವಿಶ್ವದ ಅತ್ಯಂತ ಮಾರಕ ಸಾಂಕ್ರಾಮಿಕ ರೋಗಗಳಲ್ಲಿ ಒಂದಾಗಿದೆ. ಇದನ್ನು ಕೊನೆಗೊಳಿಸುವುದಕ್ಕೆ ಬಲವಾದ, ಹೆಚ್ಚು ಸ್ಥಿತಿ ಸ್ಥಾಪಕ ಆರೋಗ್ಯ ವ್ಯವಸ್ಥೆಗಳು ಬೇಕಾಗುತ್ತದೆ. ಜನ ಕೇಂದ್ರಿತ ಕ್ಷಯರೋಗ ಆರೈಕೆಯನ್ನು ಒದಗಿಸಬೇಕು ಎಂದು ಹೇಳಿದರು.

ಶ್ವಾಸಕೋಶ ವಿಭಾಗದ ಪ್ರಾಧ್ಯಾಪಕರಾದ ಡಾ. ಜಯರಾಜ್‌ರವರು ಕ್ಷಯ ರೋಗದ ಇತಿಹಾಸ, ಹರಡುವ ವಿಧಾನಗಳು, ಕಾಯಿಲೆಯ ಗುಣಲಕ್ಷಣಗಳು, ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳು, ಸೂಕ್ತ ಚಿಕಿತ್ಸೆಯ ಕ್ರಮಗಳು ಹಾಗೂ ತಡೆಗಟ್ಟುವ ಮಾರ್ಗ ಸೂಚಿಗಳನ್ನು ತಿಳಿಸಿದರು. ಸರ್ಕಾರದಿಂದ ಕಲ್ಪಿಸಲಾಗುತ್ತಿರುವ ಉಚಿತ ತಪಾಸಣಾ ಕಾರ್ಯಗಳು ಹಾಗೂ ಉಚಿತ ಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಿದರು.

ಉಪ ಪ್ರಾಂಶುಪಾಲರಾದ ಡಾ. ಮಾಂತಪ್ಪರವರು, ಶ್ವಾಸಕೋಶ ವಿಭಾಗದ ಮುಖ್ಯಸ್ಥರಾದ ಡಾ. ಪಿ.ಎ. ಮಹೇಶ್‌ರವರು, ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ

ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿಯವರು ಜೆಎಸ್‌ಎಸ್ ಆಸ್ಪತ್ರೆಯ ಹಲವು ವಿಭಾಗದ ಮುಖ್ಯಸ್ಥರುಗಳು, ನೌಕರರುಗಳು ಹಾಗೂ ಬೋಧಕ ವರ್ಗದವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಂಗವಾಗಿ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ವಿದ್ಯಾರ್ಥಿಗಳಿಂದ ಅಂತರ ತರಗತಿ ಪೋಸ್ಟರ್ ಪ್ರಸ್ತುತಿ ಸ್ಪರ್ಧೆ ಹಾಗೂ ಕ್ಷಯರೋಗ ಕುರಿತು ಜಾನಪದ ಗೀತೆ ಸ್ಪರ್ಧೆ ಹಾಗೂ ಜನರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಕಿರುನಾಟಕವನ್ನು ಪ್ರದರ್ಶಿಸಲಾಯಿತು. ಪೋಸ್ಟರ್ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ತೃತೀಯ ವರ್ಷದ ವಿದ್ಯಾರ್ಥಿಗಳಾದ ಕು. ಲುಂಡುಪ್ ಸೋಮೋ ಮತ್ತು ತೆನ್ಜಿನ್ ಯುಡೋನ್‌ರವರು, ದ್ವಿತೀಯ ಬಹುಮಾನವನ್ನು ತೃತೀಯ ವರ್ಷದ ವಿದ್ಯಾರ್ಥಿಗಳಾದ ಕು. ಎಲ್. ಪ್ರಿಯದರ್ಶಿನಿ ಮತ್ತು ಕು. ಬಿ. ಪವಿತ್ರ ಹಾಗೂ ತೃತೀಯ ಬಹುಮಾನವನ್ನು ಪ್ರಥಮ ವರ್ಷದ ವಿದ್ಯಾರ್ಥಿಗಳಾದ ಕು. ನೇಮಾನಿ ಕೃಷ್ಣ ಮಾಧುರಿ ಹಾಗೂ ಕು. ದಿಲಿನ್ ಪ್ರದೀಪ್ ಪಡೆದುಕೊಂಡರು. ಕ್ಷಯರೋಗದ ಕುರಿತು ಜಾನಪದ ಗೀತಗಾಯನ ಸ್ಪರ್ಧೆಯಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಾದ ಕು. ನೇಮಾನಿ ಕೃಷ್ಣ ಮಾಧುರಿ ಹಾಗೂ ತಂಡದವರು ಬಹುಮಾನ ಪಡೆದರು. ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದ ಕ್ಷಯರೋಗದ ಕುರಿತು ಕಿರು ನಾಟಕವು ಬಹಳ ಮಾಹಿತಿ ಪ್ರಧಾನವಾಗಿದ್ದು, ಎಲ್ಲಾ ಅತಿಥಿಗಳಿಂದ ಪ್ರಶಂಸಿಸಲ್ಪಟ್ಟಿತು. ವಿದ್ಯಾರ್ಥಿಗಳು ತಯಾರಿಸಿದ ನವೀನ ಹಾಗೂ ಸೃಜನಾತ್ಮಕ ಪ್ರಸ್ತುತಿಯು ಜನಮೆಚ್ಚುಗೆ ಗಳಿಸಿತು.

## ಸುಸ್ಥಿರತೆಗಾಗಿ ಮಳೆಯ ಪ್ರತಿ ಹನಿಯ ರಕ್ಷಣೆ ಅಗತ್ಯ

'ಸುಸ್ಥಿರತೆಗಾಗಿ ಮಳೆಯ ಪ್ರತಿ ಹನಿಯ ರಕ್ಷಣೆ ಅಗತ್ಯ' ಎಂದು ಎನ್‌ಐಇ ಕಾಲೇಜಿನ ಸಹ ಪ್ರಾಧ್ಯಾಪಕರಾದ ಪ್ರೊ. ಶ್ಯಾಮಸುಂದರ್ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದಿಂದ ದಿನಾಂಕ 1.4.2026ರಂದು 'ವಿಶ್ವಜಲ ದಿನ' ಪ್ರಯುಕ್ತ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ 'ಭವಿಷ್ಯದ ಸುಸ್ಥಿರತೆಗಾಗಿ ನೀರಿನ ಸಂರಕ್ಷಣೆ' ವಿಷಯ ಕುರಿತು ಅವರು ಮಾತನಾಡಿದರು. ಇಂದು ವೇಗವಾಗಿ ಬೆಳೆಯುತ್ತಿರುವ ಜನಸಂಖ್ಯೆಗೆ ಪರಿಶುದ್ಧ ನೀರನ್ನು ಒದಗಿಸಲು ಜಲ ಸಂರಕ್ಷಣೆಯೊಂದೇ ಮಾರ್ಗವಾಗಿದೆ. ಪ್ರತಿಯೊಬ್ಬರು ತಮ್ಮ ಮನೆಗಳಲ್ಲಿ ನೀರು ವ್ಯರ್ಥವಾಗುವುದನ್ನು ತಡೆಯುವುದರ ಮೂಲಕ ಜಲ ಸಂರಕ್ಷಣೆಗೆ ಕೈಜೋಡಿಸಬೇಕಿದೆ. ಮೈಸೂರು ನಗರದಲ್ಲಿ ವಾರ್ಷಿಕ 800 ಮಿ.ಮಿ. ಮಳೆಯಾಗುತ್ತದೆ. ಪ್ರತಿಯೊಂದು ಮನೆಯಲ್ಲೂ ಮಳೆ ನೀರಿನ ಕೊಯ್ಲು ಮಾಡಿದರೆ ಸರಾಸರಿ ಪ್ರತಿ ಮನೆಯಲ್ಲಿ 80 ಸಾವಿರ ಲೀ. ನೀರು ಸಂಗ್ರಹವಾಗುತ್ತದೆ. ಇದರಿಂದ ಬೇಸಿಗೆಯಲ್ಲಿ ನೀರಿಗೆ ಹೆಚ್ಚು ತೊಂದರೆಯಾಗುವುದಿಲ್ಲ. ಇಂದು ಮೈಸೂರು ನಗರದ ಸುತ್ತಮುತ್ತಲಿನ ಕೆರೆಗಳು ಹೆಚ್ಚು ಕಲುಷಿತಗೊಂಡಿದ್ದು, ಇಂತಹ ನೀರು ಕೆರೆಗಳಿಗೆ ಸೇರ್ಪಡೆಯಾಗುವುದನ್ನು ತಪ್ಪಿಸಿ ಮಳೆ ನೀರನ್ನು ಕೆರೆಗಳಿಗೆ ಸೇರಿಸಿದರೆ ಅಂತರ್ಜಲವನ್ನು ಕಾಪಾಡುವುದರ ಜೊತೆಗೆ ಪರಿಸರವನ್ನು ಸ್ವಚ್ಛವಾಗಿಡುವುದಕ್ಕೆ ಸಾಧ್ಯ ಎಂದು ತಿಳಿಸಿದರು.

ವಿಶ್ವ ಜಲ ದಿನದ ಪ್ರಯುಕ್ತ ಜಲ ಸಂರಕ್ಷಣೆ ಕುರಿತ ಭಿತ್ತಿ ಚಿತ್ರಗಳ ತಯಾರಿಕ ಸ್ಪರ್ಧೆ ಏರ್ಪಡಿಸಲಾಗಿತ್ತು. ಗಣ್ಯರು ಪ್ರದರ್ಶಿಕೆಗಳನ್ನು ವೀಕ್ಷಿಸಿದರು.

ಪ್ರಾಚಾರ್ಯರಾದ ಡಾ. ರೇಚಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಮೈಸೂರಿನ ಎನ್‌ಐಇ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಪ್ರಸಾದ್, ವಿಭಾಗದ ಮುಖ್ಯಸ್ಥರಾದ ಶ್ರೀ ಎಂ.ಎಂ. ಸ್ವಾಮಿ, ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಜಗತ್ತಿನ ಸಮಸ್ಯೆಗಳನ್ನು ಅರ್ಥೈಸುವ ಸೇತುವೆ ಗಣಿತ




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ 'ಗಣಿತದ ಉದಯೋನ್ಮುಖ ವಿಷಯಗಳು ಮತ್ತು ಅದರ ಅನ್ವಯಗಳು' ಎಂಬ ವಿಷಯ ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಪ್ರೊ. ಬಿ.ವಿ. ಸಾಂಬಶಿವಯ್ಯನವರು ಉದ್ಘಾಟಿಸಿದರು. (2 ಏಪ್ರಿಲ್ 2026)

ಗಣಿತವು ಸ್ಪಷ್ಟತೆಯ ಸಾಧನವಾಗಿದ್ದು, ಅದು ಕೇವಲ ಗಣಿತ ಸಮಸ್ಯೆಗಳನ್ನಷ್ಟೇ ಅಲ್ಲ, ನೈಜ ಜೀವನದ ಸಮಸ್ಯೆಗಳನ್ನೂ ಪರಿಹರಿಸುತ್ತದೆ. ಜಗತ್ತಿನಿಂದ ಆಕಾಶಗಂಗೆವರೆಗೆ ಗಣಿತದ ವಿವರಣೆ ಕಂಡುಬರುತ್ತದೆ ಎಂದು ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ತಿಳಿಸಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಗಣಿತ ವಿಭಾಗ ಹಾಗೂ ಐಕ್ಯೂಎಸಿ ವಿಭಾಗದ ವತಿಯಿಂದ ದಿನಾಂಕ 2.4.2026 ರಂದು ನಡೆದ 'ಗಣಿತದ ಉದಯೋನ್ಮುಖ ವಿಷಯಗಳು ಮತ್ತು ಅದರ ಅನ್ವಯಗಳು' ಎಂಬ ವಿಷಯದಡಿ ಹಮ್ಮಿಕೊಂಡಿದ್ದ ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಗಣಿತವು ವ್ಯವಹಾರ, ಅರ್ಥಶಾಸ್ತ್ರ ಸೇರಿದಂತೆ ಎಲ್ಲಾ ವಿಷಯಗಳಲ್ಲಿ ಅಭಿವೃದ್ಧಿ ಹೊಂದಿದ್ದು, ಮಾನವನ ಅರಿವು ಮತ್ತು ನೈಜ ಸಮಸ್ಯೆಗಳ ನಡುವೆ ಸೇತುವೆಯಾಗಿದೆ. ವಿದ್ಯಾರ್ಥಿಗಳು ಈ ಸಮ್ಮೇಳನವನ್ನು ಪ್ರಶ್ನೆಗಳನ್ನು ಕೇಳಿ, ಚರ್ಚೆ ಮಾಡಿ, ಪಠ್ಯ ಮತ್ತು ಪಠ್ಯೇತರವಾಗಿ ಗಣಿತದ ಬೆಳವಣಿಗೆಯನ್ನು ಅರಿಯಲು ಬಳಸಿಕೊಳ್ಳಬೇಕು ಎಂದರು.

ಮದ್ರಾಸ್ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು ಹಾಗೂ ಸಿಎಸ್‌ಐಆರ್–ಎಮೆರಿಟಸ್ ಪ್ರಾಧ್ಯಾಪಕರಾದ ಪ್ರೊ. ರಾಮಜಯಂ ಸಹದೇವನ್‌ರವರು, ಗಣಿತವು ಸ್ಥಿರವಾಗಿರುವ ವಿಷಯವಲ್ಲ; ಇದು ದಿನದಿಂದ ದಿನಕ್ಕೆ ರೂಪಾಂತರಗೊಳ್ಳುತ್ತಿದೆ. ಆರಂಭದಲ್ಲಿ ಸಂಖ್ಯೆಗಳ ಮಟ್ಟಿಗೆ ಸೀಮಿತವಾಗಿದ್ದ ಗಣಿತ ಇಂದು ನೈಜ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ತನ್ನ ಸ್ಥಾನವನ್ನು ಪಡೆದಿದೆ. ಡೇಟಾ ಸೈನ್ಸ್, ಮಷಿನ್ ಲರ್ನಿಂಗ್, ಕೃತಕ ಬುದ್ಧಿಮತ್ತೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಗಣಿತದ ಪಾತ್ರ ಮಹತ್ವದ್ದಾಗಿದೆ. ವಿದ್ಯಾರ್ಥಿಗಳು ಪಠ್ಯಪುಸ್ತಕದ ಓದಿನಷ್ಟೇ ಅಲ್ಲದೆ, ನೈಜ ಜೀವನದಲ್ಲಿ ಗಣಿತದ ಅನ್ವಯಗಳನ್ನು ಅನ್ವೇಷಿಸಬೇಕು ಎಂದು ಹೇಳಿದರು.

ಪ್ರಾಂಶುಪಾಲಾರದ ಡಾ. ಎಂ. ಪ್ರಭುರವರು, ಸಮಾಜದ ಪ್ರತಿಯೊಂದು ಹಂತದಲ್ಲಿಯೂ ಗಣಿತ ಅಡಕವಾಗಿದೆ. ಬೀದಿ ವ್ಯಾಪಾರಿಯಿಂದ ಹಿಡಿದು ಉದ್ಯಮಿಗಳವರೆಗೂ ಎಲ್ಲರೂ ಸಂಖ್ಯೆಗಳೊಂದಿಗೆ ವ್ಯವಹರಿಸುತ್ತಿದ್ದಾರೆ. ಗಣಿತವು ಸಂಶೋಧನೆ, ಅಂಕಿಅಂಶ, ವ್ಯವಹಾರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಅಗತ್ಯವಾಗಿದ್ದು, ಇದು ಎಲ್ಲಾ ವಿಜ್ಞಾನ ಮತ್ತು ಸಮಾಜದ ಮೂಲಭೂತ ಆಧಾರವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕು. ಸ್ಫೂರ್ತಿ ಮತ್ತು ತಂಡ ಪ್ರಾರ್ಥಿಸಿದರು ಡಾ. ಎನ್. ರವಿಕುಮಾರ್ ಸ್ವಾಗತಿಸಿದರು. ಪ್ರೊ. ಎಸ್. ಲಿಂಗಣ್ಣ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಎಂ. ಮಹದೇವಸ್ವಾಮಿ ವಂದಿಸಿದರು. ಡಾ. ಎನ್. ಶಿಲ್ಪಾ ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮದಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳ ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗದವರು ಹಾಜರಿದ್ದರು.

## ವ್ಯಕ್ತಿತ್ವ ವಿಕಸನವಾಗದಿದ್ದರೆ ಜೀವನದ ಉದ್ದೇಶ ಫಲಿಸದು




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ವಯಂ ಸೇವಕ ಮತ್ತು ಸೇವಕಿಯರಿಗಾಗಿ ನಡೆದ ವ್ಯಕ್ತಿತ್ವ ವಿಕಸನ ಕಾರ್ಯಾಗಾರವನ್ನು ವಿಶ್ರಾಂತ ಪ್ರಾಧ್ಯಾಪಕರು ಮತ್ತು ಬೆಂಗಳೂರು ಗಾಂಧಿ ಭವನದ ಸಲಹೆಗಾರರು ಆದ ಪ್ರೊ. ಜಿ.ಬಿ. ಶಿವರಾಜುರವರು ಉದ್ಘಾಟಿಸಿ ಮಾತನಾಡುತ್ತಿರುವುದು. (9 ಏಪ್ರಿಲ್ 2026)

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕವು ದಿನಾಂಕ 9.4.2026 ರಂದು ಸ್ವಯಂ ಸೇವಕ ಮತ್ತು ಸೇವಕಿಯರಿಗಾಗಿ ವ್ಯಕ್ತಿತ್ವ ವಿಕಸನ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರವನ್ನು ವಿಶ್ರಾಂತ ಪ್ರಾಧ್ಯಾಪಕರು ಮತ್ತು ಬೆಂಗಳೂರು ಗಾಂಧಿ ಭವನದ ಸಲಹೆಗಾರರು ಆದ ಪ್ರೊ. ಜಿ.ಬಿ. ಶಿವರಾಜುರವರು ಉದ್ಘಾಟಿಸಿ ಮಾತನಾಡುತ್ತಾ ವ್ಯಕ್ತಿತ್ವ ವಿಕಸನವಾಗದಿದ್ದರೆ ಜೀವನದ ಉದ್ದೇಶ ಫಲಿಸದು. ಶಿಕ್ಷಣದ ನಿಜವಾದ ಅರ್ಥವನ್ನು ರಾಷ್ಟ್ರೀಯ ಸೇವಾ ಯೋಜನೆಯು ಪೂರ್ಣಗೊಳಿಸುತ್ತದೆ. ಎನ್‌ಎಸ್‌ಎಸ್‌ನ ಧ್ಯೇಯಕ್ಕೆ

ಅನುಗುಣವಾಗಿ ಜೀವನ ರೂಪಿಸಿಕೊಂಡರೆ ಜೀವನದಲ್ಲಿ ಎಂದೂ ಸೋಲು ಬರುವುದಿಲ್ಲ. ಸಮಾಜಮುಖಿಯಾಗಿ ಜೀವನ ನಡೆಸುವುದು ನಿಜವಾದ ವ್ಯಕ್ತಿತ್ವ ವಿಕಸನ. ಬಾಹ್ಯ ರೂಪಕ್ಕಿಂತ ಅಂತರಂಗ ಶುದ್ಧವಾಗಿರಬೇಕು. ಇಂದಿನ ಯುವಕ ಯುವತಿಯರು ನಿಸ್ವಾರ್ಥದ ಬದುಕನ್ನು ರೂಢಿಸಿಕೊಳ್ಳಬೇಕು. ತಾವು ಪರಿಶ್ರಮಿಗಳಾಗುವ ಮೂಲಕ ತಮ್ಮ ಇತಿ ಮಿತಿಯಲ್ಲಿ ಸಮಾಜಕ್ಕೆ ಕೊಡುಗೆ ನೀಡಬೇಕು. ಸುತ್ತೂರು ಶ್ರೀ ಮಠವು ಉನ್ನತವಾದ ಶಿಕ್ಷಣ ನೀಡುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಉತ್ತಮವಾದ ವ್ಯಕ್ತಿತ್ವವನ್ನು ರೂಪಿಸಲು ಶ್ರಮಿಸುತ್ತಿದೆ ಎಂದರು.

ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿಯವರು, ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ನಾವು ಸಂಪೂರ್ಣವಾಗಿ ತೊಡಗಿಸಿಕೊಂಡರೆ ಅದು ನಮ್ಮ ಜೀವನವನ್ನು ರೂಪಿಸುತ್ತದೆ. ಯಾವುದೇ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಯಶಸ್ಸನ್ನು ಪಡೆಯಲು ಎನ್‌ಎಸ್‌ಎಸ್‌ನ ಕೊಡುಗೆ ಅಪಾರ. ನಿಜವಾದ ಶಿಸ್ತುಬದ್ಧ ಜೀವನ ರೂಪಿಸಿಕೊಳ್ಳಲು ಎನ್‌ಎಸ್‌ಎಸ್ ನಿಂದ ಮಾತ್ರ ಸಾಧ್ಯ. ಇಂದಿನ ಯುವ ಪೀಳಿಗೆ ಭಾರತದ ಪರಂಪರೆಗೆ ಧಕ್ಕೆ ತರದಂತೆ ನಡೆದುಕೊಳ್ಳಬೇಕು ಎಂದರು.

ಪ್ರಾಚಾರ್ಯರಾದ ಡಾ. ರೇಚಣ್ಣ, ಎನ್‌ಎಸ್‌ಎಸ್ ಘಟಕದ ಕಾರ್ಯಕ್ರಮಾಧಿಕಾರಿಗಳಾದ ಡಾ. ಎ.ಜಿ. ಧರ್ಮೇಶ ಮತ್ತು ಶ್ರೀಮತಿ ಎನ್. ಅನುಷಾ ಉಪಸ್ಥಿತರಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಕಾಲೇಜುಗಳ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕ ಮತ್ತು ಸೇವಕಿಯರು ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಮೊದಲಿಗೆ ಕು. ಧಾತ್ರಿ ಮತ್ತು ತಂಡದವರು ಪ್ರಾರ್ಥಿಸಿದರು, ತೃತೀಯ ಬಿಕಾಂ ವಿದ್ಯಾರ್ಥಿನಿ ಕು. ಸುಶ್ಮಿತಾ ಸ್ವಾಗತಿಸಿದರು. ಪ್ರಥಮ ಬಿಕಾಂ ವಿದ್ಯಾರ್ಥಿನಿ ಕು. ಮೋನಿಕಾ ವಂದಿಸಿದರು. ಕು. ಸಂಗೀತ ಕಾರ್ಯಕ್ರಮ ನಿರೂಪಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಮೂರು ಗೋಷ್ಠಿಗಳು ನಡೆದವು. ಸಾಲಿಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ನಾಗರಾಜ್ ಬೀಜಗನಹಳ್ಳಿಯವರು 'ವ್ಯಕ್ತಿತ್ವ ವಿಕಸನ' ವಿಷಯ ಕುರಿತು, ಎರಡನೇ ಗೋಷ್ಠಿಯಲ್ಲಿ ಸೈಬರ್ ಕ್ರೈಂ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶ್ರೀ ಸಿ. ನಂದೀಶ್ ಕುಮಾರ್‌ರವರು 'ಸೈಬರ್ ಕ್ರೈಂ ಅಪರಾಧಗಳ ತಡೆಯುವಿಕೆ' ಕುರಿತು, ಮೂರನೇ ಗೋಷ್ಠಿಯಲ್ಲಿ ಸರಸ್ವತಿಪುರಂ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಶ್ರೀ ಶೇಷಾದ್ರಿಯವರು 'ಮಾದಕ ವಸ್ತು ಸೇವನೆ ದುಷ್ಪರಿಣಾಮಗಳು ಮತ್ತು ತಡೆಯುವಿಕೆಯ ಕ್ರಮಗಳು' ವಿಷಯ ಕುರಿತು ಉಪನ್ಯಾಸವನ್ನು ನೀಡಿದರು.

## ಸುಸ್ಥಿರ ಪರಿಸರದ ಅಭಿವೃದ್ಧಿಗೆ ಆರ್ಥಿಕ ನೆರವು ಅಗತ್ಯ

ಸುಸ್ಥಿರ ಪರಿಸರದ ಅಭಿವೃದ್ಧಿಗೆ ಸಂಸ್ಥೆಗಳ ಹಣಕಾಸಿನ ನೆರವು ಅಗತ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಎನ್. ನಾಗರಾಜರವರು ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಸ್ನಾತಕೋತ್ತರ ವಾಣಿಜ್ಯ ವಿಭಾಗ ಹಾಗೂ ಜೆಎಸ್‌ಎಸ್ ಸಂಶೋಧನಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ದಿನಾಂಕ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಒಂದು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಪ್ರೊ. ಎನ್. ನಾಗರಾಜರವರು ಮಾತನಾಡುತ್ತಿರುವುದು. (22 ಏಪ್ರಿಲ್ 2026)

22.4.2026ರಂದು ನಡೆದ 'ಗ್ರೀನ್ ಫೈನಾನ್ಸ್ ಮತ್ತು ಸುಸ್ಥಿರ ನಿರ್ವಹಣೆಯಲ್ಲಿನ ಸಂಶೋಧನೆಯ ಹೊಸ ಮಾದರಿಗಳು' ಎಂಬ ವಿಷಯ ಕುರಿತ ಒಂದು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು. ಸಂಪನ್ಮೂಲಗಳನ್ನು ಸಂರಕ್ಷಿಸಲು ಸುಸ್ಥಿರ ಕ್ರಮಗಳು ಅತ್ಯಗತ್ಯವಾಗಿದೆ. ಭಾರತದ ಬಂಡವಾಳವು ವಿದೇಶಗಳಿಗೆ ಸೋರಿ ಹೋಗದೆ ದೇಶದ ಒಳಗೆ ಉಳಿಯುವಂತಾಗಬೇಕು. ಪರಿಸರ ಸಂಪನ್ಮೂಲಗಳನ್ನು ರಕ್ಷಿಸಲು ಗಾಳಿ ಮತ್ತು ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರೀಕ್ಷಿಸುವ ಅಗತ್ಯವಿದೆ. ಗ್ರೀನ್ ಫೈನಾನ್ಸ್ ಇಂದು ಕೇವಲ ಭರವಸೆಗಳಿಗಷ್ಟೇ ಸೀಮಿತವಾಗಿಲ್ಲ; ಇದು ಹೂಡಿಕೆಯ ಮೇಲಿನ ಲಾಭ ಮತ್ತು ಇಂಗಾಲದ ಹೊರಸೂಸುವಿಕೆ ಕಡಿತದ ಸ್ಪಷ್ಟ ಫಲಿತಾಂಶಗಳನ್ನು ಆಧರಿಸಿದೆ. ಆಧುನಿಕ ಹಣಕಾಸು ವ್ಯವಸ್ಥೆಯು ಕೇವಲ ಇಂಗಾಲದ ಕಡಿತವನ್ನಷ್ಟೇ ಅಲ್ಲದೆ, ಪ್ರಕೃತಿ–ಪರವಾದ ಅಭಿವೃದ್ಧಿ, ನೈಸರ್ಗಿಕ ಬಂಡವಾಳ ಮತ್ತು ಸುಸ್ಥಿರ ಮೂಲಸೌಕರ್ಯಗಳ ಮೇಲೆ ಹೂಡಿಕೆ ಮಾಡುವ ಮೂಲಕ ಭವಿಷ್ಯದ ಆರ್ಥಿಕತೆಯನ್ನು ಭದ್ರಪಡಿಸುತ್ತಿದೆ ಎಂದು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಪ್ರಾದೇಶಿಕ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್. ಪ್ರತಿಮಾರವರು ಮಾತನಾಡುತ್ತಾ, ಸುಸ್ಥಿರತೆ ಎಂಬುದು ಇಂದಿನ ಕಾಲಘಟ್ಟದಲ್ಲಿ ಆಯ್ಕೆಯಲ್ಲ, ಬದಲಾಗಿ ಅದೊಂದು ಅನಿವಾರ್ಯತೆಯಾಗಿದೆ. ಅಸ್ತಿತ್ವದಲ್ಲಿರುವ ಪರಿಸರ ಸಮಸ್ಯೆಗಳನ್ನು ತೊಡೆದುಹಾಕಲು ನವೀನ ಪರಿಹಾರಗಳನ್ನು ಕಂಡುಕೊಳ್ಳಬೇಕು ಮತ್ತು ಪರಿಸರದ ಅಪರೂಪದ ಸಂಪನ್ಮೂಲಗಳನ್ನು ಅತ್ಯುತ್ತಮವಾಗಿ ಬಳಸಿಕೊಳ್ಳಬೇಕು.

ಜೊತೆಗೆ ಜಾಗತಿಕ ಪರಿಸರ ಬಿಕ್ಕಟ್ಟುಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಇಂತಹ ವಿಚಾರಸಂಕಿರಣಗಳು ಅವಶ್ಯಕ ಎಂದರು.

